ಕರ್ನಾಟಕ ಸರ್ಕಾರ
Government of Karnataka

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ

ಅಪರ ನಿರ್ದೇಶಕರ ಕಾರ್ಯಾಲಯ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಛೇರಿ ಕಲಬುರಗಿ

2016-17ನೇ ಸಾಲಿನ ಲೆಕ್ಕಪರಿಶೋಧನಾ ವರದಿ
2016-17 Audit Report

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕಾಡಾ)
ಭೀಮರಾಯನಗುಡಿ

Command Area Development Authority (CADA)
BHEEMARAYANAGUDI

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕೃಷ್ಣಾ ಕಾಡಾ) ಭೀಮರಾಯನಗುಡಿ
2016-17 ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

ಪೀಠಿಕೆ:

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕೃಷ್ಣಾ ಕಾಡಾ) ಭೀಮರಾಯನಗುಡಿ ಇದರ 2016-17ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಕಾಡಾ ಕಾಯ್ದೆ 24(2) ರ ಪ್ರಕಾರ ಕೈಗೊಳ್ಳಲಾಗಿದೆ.

1	**ಸಾಮಾನ್ಯ ವಿವರ :** ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕೃಷ್ಣಾ ಕಾಡಾ) ಭೀಮರಾಯನಗುಡಿ			
2	**ಸಂಸ್ಥೆ ಸಂಘಟನೆ**			
2.1	ಅಧ್ಯಕ್ಷರು	1	ಶ್ರೀ ಮರಿಗೌಡಾ ಪಾಟೀಲ ಹುಲಕಲ್ (ಕೆ)	01-04-2016 ರಿಂದ 06-11-2016
		2	ಶ್ರೀ ಜಕ್ಕಪ್ಪ ಸುಭಾಸ ಯಡವೆ	07-11-2016 ರಿಂದ 31-03-2017
2.2	ಆಡಳಿತಾಧಿಕಾರಿಗಳು	1	ಶ್ರೀ ಪ್ರಮೋದರೆಡ್ಡಿ ಪಾಟೀಲ	01-04-2016 ರಿಂದ 22-01-2017
		2	ಶ್ರೀ ಶರಣಬಸಪ್ಪ ಬೆಣ್ಣೂರ	23-01-2017 ರಿಂದ 31-03-2017
2.3	ಉಪ ಆಡಳಿತಾಧಿಕಾರಿಗಳು	1	ಶ್ರೀ ಎಸ್.ಎ. ಹುಡಿಮನಿ	01-04-2016 ರಿಂದ 16-10-2016
		2	ಶ್ರೀ ಎನ್.ಡಿ. ಪಾಟೀಲ	17-10-2016 ರಿಂದ 31-03-2017
2.4	ಭೂ ಅಭಿವೃದ್ಧಿ ಅಧಿಕಾರಿ (ಕೃಷಿ)		ಶ್ರೀ ರತೇಂದ್ರನಾಥ ಸೂಗೂರ	01-4-2016 ರಿಂದ 31-03-2017.
2.5	ಭೂ ಅಭಿವೃದ್ಧಿ ಅಧಿಕಾರಿ (ಸಹಕಾರ)		ಶ್ರೀ ಶರಣಬಸಪ್ಪ ಬೆಣ್ಣೂರ	01-4-2016 ರಿಂದ 31-03-2017.
2.6	ಉಪ ಕೃಷಿ ನಿರ್ದೇಶಕರು	1	-ಖಾಲಿ-	
2.7	ಪ್ರಾಚಾರ್ಯರು ಭೂ ಅಭಿವೃದಿ ತರಬೇತಿ	1	-ಖಾಲಿ-	
2.8	ಮುಖ್ಯ ಲೆಕ್ಕಾಧಿಕಾರಿಗಳು	1	ಶ್ರೀ ಬನ್ನಪ್ಪ.ಜಿ.ಗುಡಿಮನಿ	01-4-2016 ರಿಂದ 21-02-2017
		2	ಶ್ರೀ ಮಹೇಶ ಮಾಲಗತ್ತಿ	22-02-2017 ರಿಂದ 31-03-2017
2.9	ಪತ್ರಾಂಕಿತ ವ್ಯವಸ್ಥಾಪಕರು	1	ಶ್ರೀ ಎಸ್.ಎ. ಹುಡಿಮನಿ	01-04-2016 ರಿಂದ 16-10-2016
		2	ಶ್ರೀ ಈಶ್ವರ ಬಿ. ಹುಕ್ಕೇರಿ	17-10-2016 ರಿಂದ 31-03-2017
3	**ವಿಭಾಗಗಳು:**			
3.1	ಹೊಲಗಾಲುವೆ ವಿಭಾಗ-1 ಅವರಾದ			
3.2	ಹೊಲಗಾಲುವೆ ವಿಭಾಗ-2 ಹಸನಾಪೂರ			
3.3	ಹೊಲಗಾಲುವೆ ವಿಭಾಗ-3 ಆಲಮಟ್ಟಿ			
3.4	ಹೊಲಗಾಲುವೆ ವಿಭಾಗ-4 ಆಲಮೇಲ			
4	**ಲೆಕ್ಕ ತಪಸಣಾ ಅವಧಿ**		**2016-17**	
5	ಲೆಕ್ಕ ಪರಿಶೋಧಕರ ವಿವರ	1	ಶ್ರೀ ಜನಕಕುಮಾರ	ಲೆಕ್ಕಾಧೀಕ್ಷಕರು
		2	ಶ್ರೀ ಸಾಹೇಬಗೌಡ ಎಂ. ಪಾಟೀಲ	ಲೆಕ್ಕಾಧೀಕ್ಷಕರು
		3	ಶ್ರೀ ಮುಹಮ್ಮದ ಸನಾಉಲಾ	ಲೆಕ್ಕಾಧೀಕ್ಷಕರು
		4	ಶ್ರೀಮತಿ ಸಿದ್ದಮ್ಮ	ಲೆಕ್ಕಾಧೀಕ್ಷಕರು
		5	ಶ್ರೀ ರಾಘವೇಂದ್ರ ಗಡ್ಡಂ	ಲೆಕ್ಕಾಧೀಕ್ಷಕರು
		6	ಶ್ರೀ. ಶಿವರಾಜ	ಲೆಕ್ಕಾಧೀಕ್ಷಕರು
		7	ಶ್ರೀ ಸೂರ್ಯಕಾಂತ	ಲೆಕ್ಕ ಸಹಾಯಕರು
6	ಲೆಕ್ಕ ತನಿಖೆ ಪ್ರಾರಂಭಿದ ದಿನಾಂಕ:		23-10-2017	
7	ಲೆಕ್ಕ ತನಿಖೆ ಮುಕ್ತಾಯದ ದಿನಾಂಕ:		03-11-2017	
8	ತೆಗೆದಿಕೊಂಡ ಮಾನವ ದಿನಗಳು		(70) ಮಾನವ ದಿನಗಳು	
9	ಪರಿವೀಕ್ಷಣಾ ದಿನಾಂಕ:		25-01-2018	
10	ಪರಿವೀಕ್ಷಣಾಧಿಕಾರಿಗಳು:		**ಶ್ರೀ ಸುಭಾಷ ತುಗಾವೆ.** ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಛೇರಿ ಕಲಬುರಗಿ.	

10. ಉಪ ವಿಭಾಗಗಳು:

10.1 ವಿಭಾಗ-1 ರ ಅವರಾದ ವಿಭಾಗದಲ್ಲಿ ಬರುವ ಕಛೇರಿಗಳು

- ಸ.ಕಾ.ನಿ.ಅ.ಉಪ ವಿಭಾಗ-1. **ಅವರಾದ**
- ಸ.ಕಾ.ನಿ.ಕ.ಉಪ ವಿಭಾಗ-2 **ಚಿಗರಳ್ಳಿ**
- ಸ.ಕಾ.ನಿ.ಕ. ಉಪ ವಿಭಾಗ-3 **ಅವರಾದ**
- ಸ.ಕಾ.ನಿ.ಕ ಉಪ ವಿಭಾಗ-4 **ಭೀಮರಾಯನಗುಡಿ**
- ಸ.ಕಾ.ನಿ.ಕ ಉಪ ವಿಭಾಗ-5 **ಭೀಮರಾಯನಗುಡಿ**

10.2 ವಿಭಾಗ-2 ರ ಹಸನಾಪೂರ ವಿಭಾಗದಲ್ಲಿ ಬರುವ ಕಛೇರಿಗಳು

- ಸ.ಕಾ.ನಿ.ಅ.ಉಪ ವಿಭಾಗ-**6, ಕೃಷ್ಣಾಪೂರ**
- ಸ.ಕಾ.ನಿ.ಕ.ಉಪ ವಿಭಾಗ-**7, ಕೃಷ್ಣಾಪೂರ**
- ಸ.ಕಾ.ನಿ.ಅ. ಉಪ ವಿಭಾಗ-**8, ಮಸರಕಲ್**
- ಸ.ಕಾ.ನಿ.ಅ ಉಪ ವಿಭಾಗ-**9, ಹಸನಾಪೂರ**
- ಸ.ಕಾ.ನಿ.ಅ ಉಪ ವಿಭಾಗ-**10, ಕೃಷ್ಣಾಪೂರ**

10.3 ವಿಭಾಗ-3 ರ ಆಲಮಟ್ಟಿ ವಿಭಾಗದಲ್ಲಿ ಬರುವ ಕಛೇರಿಗಳು

- ಸ.ಕಾ.ನಿ.ಅ.ಉಪ ವಿಭಾಗ-**11, ಆಲಮಟ್ಟಿ**
- ಸ.ಕಾ.ನಿ.ಅ.ಉಪ ವಿಭಾಗ-**12, ಆಲಮಟ್ಟಿ**
- ಸ.ಕಾ.ನಿ.ಅ. ಉಪ ವಿಭಾಗ-**15, ಆಲಮಟ್ಟಿ**

10.4 ವಿಭಾಗ-4ರ ಆಲಮೇಲ ವಿಭಾಗದಲ್ಲಿ ಬರುವ ಕಛೇರಿಗಳು

- ಸ.ಕಾ.ನಿ.ಅ.ಉಪ ವಿಭಾಗ-**13, ರಾಂಪೂರ**
- ಸ.ಕಾ.ನಿ.ಅ.ಉಪ ವಿಭಾಗ-**14, ಆಲಮೇಲ್**
- ಸ.ಕಾ.ನಿ.ಅ. ಉಪ ವಿಭಾಗ-**16, ರಾಂಪೂರ**

ಭಾಗ-1

ಹಿಂದಿನ ಸಾಲಿನ ಲೆಕ್ಕಪರಿಶೋಧನೆಯ ವರದಿಯಲ್ಲಿನ ಕಂಡಿಕೆಗಳ ಮಾಹಿತಿ.

ಅಚ್ಚುಕಟ್ಟು ಪ್ರಾದೇಶಾಭಿವೃದ್ಧಿ ಪ್ರಾಧಿಕಾರ (ಕೃಷ್ಣ ಕಾಡಾ) ಪ್ರಾಧಿಕಾರ ಭೀಮರಾಯನಗುಡಿ
ಇದರ 2016-17ನೇ ಸಾಲಿನ ಅಂತ್ಯಕ್ಕೆ ತೀರುವಳಿಯಾಗದ ಬಾಕಿ ಉಳಿದ ಕಂಡಿಕೆಗಳ ಮಾಹಿತಿ ಈ ಕೆಳಗಿನಂತಿದೆ.

ಕ್ರ ಸಂ	ವರ್ಷ	ಒಟ್ಟು ಪ್ಯಾರಾ ಸಂಖ್ಯೆ	ಒಟ್ಟು ಆಕ್ಷೇಪಣೆ	ಒಟ್ಟು ವಸೂಲಾತಿ	ವಿಲೇವಾರಿ			ಒಟ್ಟು ಪ್ಯಾರಾ ಸಂಖ್ಯೆ	ಒಟ್ಟು ಆಕ್ಷೇಪಣೆ ಮೊತ್ತ	ಒಟ್ಟು ವಸೂಲಾತಿ ಮೊತ್ತ
					ಪ್ಯಾರಾ ಸಂಖ್ಯೆ	ಆಕ್ಷೇಪಣೆ ಸಂಖ್ಯೆ	ವಸೂಲಾತಿ			
1	**2**	**3**	**4**	**5**	**6**	**7**	**8**	**9**	**10**	**11**
1	1986-87	81	1359765	364408	0	0	0	81	1359765	364408
2	1987-88	34	1201861	23157	0	0	0	34	1201861	23157
3	1988-89	43	1452116	0	0	0	0	43	1452116	0
4	1989-90	116	6935656	18816797	0	0	0	116	6935656	18816797
5	1990-91									
6	1991-92	105	3277040	3511054	0	0	0	105	3277040	3511054
7	1992-93	45	32126776	293448	0	0	0	45	32126776	293448
8	1993-94	43	3473147	8311740	0	0	0	43	3473147	8311740
9	1994-95	32	2511523	6457770	0	0	0	32	2511523	6457770
10	1995-96	20	1462047	12510	0	0	0	20	1462047	12510
11	1996-97	23	15556868	1704845	0	0	0	23	15556868	1704845
12	1997-98	30	9142667	839417	0	0	0	30	9142667	839417
13	1998-99	31	7554400	689417	0	0	0	31	7554400	689417
14	1999-01	16	1082793	49675	0	0	0	16	1082793	49675
15	2001-02	8	998604	26672	0	0	0	8	998604	26672
16	2002-03	7	5405808	136936	0	0	0	7	5405808	136936
17	2003-04	12	850938	1901330	0	0	0	12	850938	1901330
18	2004-05	12	850938	1901330	0	0	0	12	850938	1901330
19	2005-06	12	2326768	749961	0	0	0	12	2326768	749961
20	2006-07	7	20104	188054	0	0	0	7	20104	188054
21	2007-08	2	0	1874555	0	0	0	2	0	1874555
22	2008-09	6	44715	886272	0	0	0	6	44715	886272
23	2009-10	6	9075188	59885	0	0	0	6	9075188	59885
24	2010-11	5	457362	65503	0	0	0	5	457362	65503
25	2011-12	1	551433	0	0	0	0	1	551433	0
26	2012-13	0	0	0	0	0	0	0	0	0
27	2013-14	0	0	0	0	0	0	0	0	0
28	2014-15	9	4688301	833996	0	0	0	9	4688301	833996
29	2015-16	7	5,98,77,980	4,88,900	0	0	0	7	5,98,77,980	4,88,900
	ಒಟ್ಟು	**713**	**172284798**	**50187632**	**0**	**0**	**0**	**713**	**172284798**	**50187632**

ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಛೇರಿ, ಕಲಬುರಗಿ.

ಪ್ರಸಕ್ತ ಸಾಲಿನ ಕಂಡಿಕೆಗಳ ವಿವರ (2016-17)

ಕ್ರ ಸಂ	ಕಂಡಿಕೆ ಸಂಖ್ಯೆ	ವಿವರ	ಆಕ್ಷೇಪಣೆ ಮೊತ್ತ	ವಸೂಲಾತಿ ಮೊತ್ತ
1	2.2	ವಾರ್ಷಿಕ ಲೆಕ್ಕಪತ್ರದ ಆರಂಭಿಕ ಶಿಲ್ಕಿನಲ್ಲಿ ಇರುವ ವ್ಯತ್ಯಾಸದ ಕುರಿತು.	46,76,335.00	0.00
2	5	ಚಾಲ್ತಿಯಲ್ಲಿರದ ಬ್ಯಾಂಕ ಖಾತೆಗಳನ್ನು ಮುಂದುವರೆಸಿಕೊಂಡು ಬರುತ್ತಿರುವ ಬಗ್ಗೆ.	2,40,810.00	0.00
3	6	ತಾತ್ಕಾಲಿಕ ಮುಂಗಡ ಹಣ ಮಾರ್ಚ-2017 ರ ಅಂತ್ಯದೊಳಗಾಗಿ ಹೊಂದಾಣಿಕೆ ಮಾಡದೇ ಇರುವ ಬಗ್ಗೆ.	0.00	2,54,565.00
4	7	ಕಡಿಮೆ ಮೊತ್ತದ ಸ್ಟ್ಯಾಂಪ್ ಪೇಪರ್ ಮೇಲೆ ಕಾಮಗಾರಿಯ ಕರಾರು ಒಪ್ಪಂದ ಮಾಡಿಕೊಂಡಿರುವ ಬಗ್ಗೆ.	0.00	2,800.00
5	8	ಕಾಮಗಾರಿಯನ್ನು ಮುಕ್ತಾಯಗೊಳಿಸದೇ ರೂ. 6,40,470.00ಗಳನ್ನು ಪಾವತಿಸಿ ಅನುಪಯುಕ್ತ ಹಾಗೂ ಫಲರಹಿತ ವೆಚ್ಚ ಮಾಡಿರುವ ಬಗ್ಗೆ.	6,40,470.00	0.00
6	14	ಬಾಡಿಗೆ ಆಧಾರದ ಮೇಲೆ ವಾಹನ ಪಡೆದುಕೊಂಡಿರುವ ಬಗ್ಗೆ.	23,99,520.00	0.00
7	15	2016-17ನೇ ಸಾಲಿನ ಅಧಿಕಾರಿ/ಸಿಬ್ಬಂದಿಯವರ ಆದಾಯ ತೆರಿಗೆ ಲೆಕ್ಕದ ತಖ್ತೆಯಲ್ಲಿ ಮನೆಬಾಡಿಗೆ ಮೊತ್ತವನ್ನು ವಿನಾಯತಿ ನೀಡಿರುವ ಬಗ್ಗೆ.	3,19,740.00	0.00
8	19	ವಿಭಾಗದ ವಾಹನ ದುರಸ್ತಿ ಬಿಲ್ಲುಗಳ ಪಾವತಿಯಲ್ಲಿ ನಿಯಮಗಳನ್ನು ಪಾಲಿಸದೇ ಇರುವ ಕುರಿತು. (ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ FIC.DN.03 ಆಲಮಟ್ಟಿ)	38,601.00	0.00
9	20	ಮೆ॥ ಮನೀಷ್ ಮ್ಯಾನ್ ಪವರ್ ಏಜೆನ್ಸಿ ಇವರಿಂದ ಹೊರಮೂಲ ಸಿಬ್ಬಂದಿ ಸೇವೆಯನ್ನು ಪಡೆದಿರುವ ಬಗ್ಗೆ.	3,45,955.00	6,919.00
		ಒಟ್ಟು ರೂ.	**86,61,431.00**	**2,64,284.00**

ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಛೇರಿ,
ಕಲಬುರಗಿ.

ಭಾಗ-2

1 ಆಯವ್ಯಯ:

2016-17ನೇ ಸಾಲಿನ ಆಯವ್ಯಯವನ್ನು ಕಾಡಾ ಅನುದಾನ ಮತ್ತು ಕೃಷ್ಣಾ ಭಾಗ್ಯ ಜಲ ನಿಗಮದ ಅನುದಾನಗಳಿಗೆ ಪ್ರತ್ಯೇಕ ಆಯವ್ಯಯ ಪಟ್ಟಿಗಳನ್ನು ತಯಾರಿಸಿ ದಿನಾಂಕ: 02-01-2016 ರಂದು ನಿರ್ದೇಶಕರು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ನಿರ್ದೇಶನಾಲಯ ಬೆಂಗಳೂರು ಇವರಿಗೆ ಸಲ್ಲಿಸಲಾಗಿದೆ.

ಕರ್ನಾಟಕ ಕಾಡಾ ಅಧಿನಿಯಮ (PD 99 CAH 79 P Dtd31-10-1980) 1980 ಸೆಕ್ಷನ್ 10 ರನ್ವಯ ಅಂದಾಜು ಪಟ್ಟಿಯನ್ನು ನಮೂನೆ-5 ರಲ್ಲಿ ಸಿದ್ಧಪಡಿಸಿ ಫೆಬ್ರುವರಿ 10 ರೊಳಗಾಗಿ ಸರ್ಕಾರದ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಿ ಅನುಮೋದನೆ ಪಡೆಯಬೇಕು.

2016-17ನೇ ಸಾಲಿನ ವಾರ್ಷಿಕ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ವಿಚಾರಣೆ ಪತ್ರ ಸಂಖ್ಯೆ: 01 ರ ಮೂಲಕ ಕೋರಲಾಗಿತ್ತು, ಆದರೆ ಲೆಕ್ಕ ಪರಿಶೋಧನೆಗೆ ಸಲ್ಲಿಸಿರುವುದಿಲ್ಲ. ವಾರ್ಷಿಕ ಲೆಕ್ಕ ಪತ್ರದಲ್ಲಿ ತೋರಿಸಿದ ಅಂಕಿ ಅಂಶಗಳ ಆಧಾರದ ಮೇಲಿಂದ ಆಯವ್ಯಯದ ಜಮೆ ಮತ್ತು ಪಾವತಿಗಳ ಮಾಹಿತಿಯನ್ನು ಪಡೆಯಲಾಗಿದೆ.

2 ಲೆಕ್ಕ ಪತ್ರಗಳು.

2.1 ಮಾಸಿಕ ಲೆಕ್ಕಪತ್ರ:

ಕಾಡಾ ವಾರ್ಷಿಕ ಲೆಕ್ಕಪತ್ರದ ನಮೂನೆಯಲ್ಲಿ ಆಯವ್ಯಯದ ಶೀರ್ಷಿಕೆಗಳಡಿ ಸ್ವೀಕೃತಿಯಾದ ಮತ್ತು ಸಂದಾಯ ಮಾಡಿದ ವಿವರಗಳನ್ನು ಭರ್ತಿ ಮಾಡಿ ಮಾಸಿಕ ಲೆಕ್ಕಪತ್ರಗಳನ್ನು ತಯಾರಿಸಿ ನಿರ್ದೇಶಕರು ಕಾಡಾ ನಿರ್ದೇಶನಾಲಯ, ವ್ಯವಸ್ಥಾಪಕ ನಿರ್ದೇಶಕರು ಕೃ.ಭಾ.ಜ.ನಿ.(ನಿ.) ಬೆಂಗಳೂರು ಹಾಗೂ ಅಪರ ನಿರ್ದೇಶಕರು ಪ್ರಾಂತೀಯ ಲೆಕ್ಕ ಪರಿಶೋಧನಾ ಕಛೇರಿ ಕಲಬುರಗಿ ಇವರಿಗೆ ಸಲ್ಲಿಸಬೇಕು.

ಮಾಸಿಕ ಲೆಕ್ಕಪತ್ರಗಳನ್ನು ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಛೇರಿ, ಕಲಬುರಗಿ ಇವರಿಗೆ ಸಲ್ಲಿಸಿರುವುದಿಲ್ಲ. ಇನ್ನೂ ಮುಂದೆ ಸಲ್ಲಿಸಲು ಸೂಚಿಸಲಾಗಿದೆ.

2.2 ವಾರ್ಷಿಕ ಲೆಕ್ಕಪತ್ರದ ಆರಂಭಿಕ ಶಿಲ್ಕಿನಲ್ಲಿ ಇರುವ ವ್ಯತ್ಯಾಸದ ಕುರಿತು.

2016-17ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ದಿನಾಂಕ: 20-07-2017 ರಂದು ತಯಾರಿಸಿ ಅನುಮೋದಿತ ಲೆಕ್ಕಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಆರ್ಥಿಕ ಪರಿಸ್ಥಿತಿಯ ಸಂಕ್ಷಿಪ್ತ ಮಾಹಿತಿ ಈ ಕೆಳಗಿನಂತಿದೆ.

ಆರಂಭಿಕ ಶಿಲ್ಕು	ಸ್ವೀಕೃತಿ	ಒಟ್ಟು	ಖರ್ಚು	ಅಂತಿಮ ಶಿಲ್ಕು
14,82,63,041	1,79,97,66,205	1,94,80,29,246	1,70,92,77,918	23,87,51,328

2015-16ನೇ ಸಾಲಿನ ಅಂತಿಮ ಶಿಲ್ಕು 2016-17ನೇ ಸಾಲಿನ ಆರಂಭಿಕ ಶಿಲ್ಕು ಒಂದೇ ಇರಬೇಕು. ಆದರೆ 2015-16ನೇ ಸಾಲಿನಲ್ಲಿ ಅಂತಿಮ ಶಿಲ್ಕು ರೂ.14,35,86,706.00ಗಳು ಎಂದು ತೋರಿಸಿದ್ದು, ಈ ವರ್ಷದ ಆರಂಭಿಕ ಶಿಲ್ಕು ರೂ.14,82,63,041.00 ಎಂದು ತೋರಿಸಲಾಗಿದೆ. ವ್ಯತ್ಯಾಸ ರೂ.46,76,335.00ಗಳಿದ್ದು

ಈ ವ್ಯತ್ಯಾಸಕ್ಕೆ ಸೂಕ್ತ ವಿವರಣೆ ನೀಡುವುದು, ಅಲ್ಲಿಯವರೆಗೆ ರೂ. 46,76,335.00 ಗಳನ್ನು ಆಕ್ಷೇಪಣೆಯಲ್ಲಿ ಇಡಲಾಗಿದೆ. ಮತ್ತು ಈ ವ್ಯತ್ಯಾಸದ ಕಾರಣಗಳಿಗಾಗಿ ಆಡಳಿತಾಧಿಕಾರಿಗಳು, ಅಚ್ಚುಕಟ್ಟು ಪ್ರಾದೇಶಾಭಿವೃದ್ಧಿ (ಕೃಷ್ಣ ಕಾಡಾ) ಪ್ರಾಧಿಕಾರ ಭೀಮರಾಯನಗುಡಿರವರು ಸಲ್ಲಿಸಿದ ವಾರ್ಷಿಕ ಲೆಕ್ಕಪತ್ರಗಳಲ್ಲಿನ ಪ್ರಾರಂಭಿಕ ಶಿಲ್ಕನ್ನು ವಾಸ್ತವಿಕ ಪ್ರಾರಂಭಿಕ ಶಿಲ್ಕು ಎಂದು ಪರಿಗಣಿಸಲು ಬರುವುದಿಲ್ಲ.

2.3 ಪ್ರಸಕ್ತ ಸಾಲಿನಲ್ಲಿ ನಗದೀಕರಣವಾಗದ ಚೆಕ್‌ಗಳ ಮಾಹಿತಿ:-

ಪ್ರಸಕ್ತ ಸಾಲಿನಲ್ಲಿ ಕೆ.ಬಿ.ಜೆ.ಎನ್.ಎಲ್ ಅನುದಾನ ಖಾತೆ ಮತ್ತು ಕಾಡಾ ಅನುದಾನದ ಖಾತೆಗಳ ಅಡಿ ಪಾವತಿ ಮಾಡಿದ ಮತ್ತು ನಗದೀಕರಣವಾಗದಿರುವ ಚೆಕ್‌ಗಳ ಒಟ್ಟು ಮೊತ್ತ ರೂ. 19,44,58,744=00 ಇರುತ್ತದೆ. ಇವುಗಳ ವಿವರವಾದ ಮಾಹಿತಿಯನ್ನು ಅನುಬಂಧ-1(A&B) ರಲ್ಲಿ ತೋರಿಸಲಾಗಿದೆ.

3 ಕಾಡಾ ಕಛೇರಿಯು ಹೊಂದಿದ ಬ್ಯಾಂಕ ಖಾತೆಗಳ ವಿವರ:-

ಪ್ರಸಕ್ತ ಸಾಲಿನಲ್ಲಿ ಕಾಡಾ ಕಛೇರಿಯು 6 ಬ್ಯಾಂಕ ಖಾತೆಗಳನ್ನು ಹೊಂದಿರುತ್ತದೆ. ಇವುಗಳಲ್ಲಿ 4 ಖಾತೆಗಳ ಮೂಲಕ ವಹಿವಾಟುಗಳನ್ನು ಮಾಡಲಾಗಿದೆ. ಬಾಕಿ ಉಳಿದ 2 ಖಾತೆಗಳಲ್ಲಿ ವಹಿವಾಟುಗಳು ನಡೆದಿರುವುದಿಲ್ಲ. ಅವುಗಳ ವಿವರವಾದ ಮಾಹಿತಿಯನ್ನು ಅನುಬಂಧ-2 ರಲ್ಲಿ ತೋರಿಸಲಾಗಿದೆ.

4 ನಗದು ಪುಸ್ತಕಗಳನ್ನು ನಿರ್ವಹಿಸದೇ ಇರುವ ಕುರಿತು:-

ಲೆಕ್ಕಪತ್ರಗಳ ನಿಯಮಾನುಸಾರ ಒಂದು ಬ್ಯಾಂಕ ಖಾತೆಗೆ ಪ್ರತ್ಯೇಕವಾದ ಬ್ಯಾಂಕ ಪುಸ್ತಕವನ್ನು ನಿರ್ವಹಿಸಬೇಕು. ಆದರೆ ಕೃಷ್ಣಾ ಕಾಡಾ, ಭೀಮರಾಯನಗುಡಿ ಅಡಿ ಕಾಡಾ ಅನುದಾನ ಬ್ಯಾಂಕ್ ಖಾತೆ ಸಂಖ್ಯೆ: 52187860160 ಮತ್ತು ಕೆ.ಬಿ.ಜೆ.ಎನ್.ಎಲ್. ಅನುದಾನ ಖಾತೆ ಸಂಖ್ಯೆ: 52187866504 ಗಳಿಗಾಗಿ ಮಾತ್ರ ನಗದು ಪುಸ್ತಕ ಬರೆಯಲಾಗಿದ್ದು, ಉಳಿದ ಖಾತೆಗಳಾದ CADA Receipt A/C No. 52187866480, KBJNL Receipt A/C No. 52187866491 SBI ಶಹಾಪೂರ ಬ್ಯಾಂಕ್ ಖಾತೆ ಸಂಖ್ಯೆ: 34732267085 ಮತ್ತು ನಾರಾಯಣಪೂರ ಖಾತೆ ಸಂಖ್ಯೆ: 62006711927 ಗಳ ನಗದು ಪುಸ್ತಕ ನಿರ್ವಹಿಸಿರುವುದಿಲ್ಲ.

5 ಚಾಲ್ತಿಯಲ್ಲಿರದ ಬ್ಯಾಂಕ ಖಾತೆಗಳನ್ನು ಮುಂದುವರೆಸಿಕೊಂಡು ಬರುತ್ತಿರುವ ಬಗ್ಗೆ:

ಈಗಾಗಲೇ ತೆರೆದ ಬ್ಯಾಂಕ ಖಾತೆಗಳು ಚಾಲನೆಯಲ್ಲಿ ಇಲ್ಲದಿದ್ದರೆ, ಖಾತೆಯಲ್ಲಿರುವ ಶಿಲ್ಕನ್ನು ನಿಯಮಾನುಸಾರ ವರ್ಗಾವಣೆ/ಅಧ್ಯರ್ಪಣೆ ಮಾಡಿ ಖಾತೆಗಳನ್ನು ಮುಕ್ತಾಯಗೊಳಿಸಬೇಕು. ಆದರೆ ಲೆಕ್ಕಪರಿಶೋಧನಾ ಸಮಯದಲ್ಲಿ ಎಸ್.ಬಿ.ಐ., ಶಹಾಪೂರ ಶಾಖೆಯಲ್ಲಿ ಚಾಲನೆಯಲ್ಲಿಲ್ಲದ ಬ್ಯಾಂಕ್ ಖಾತೆ ಸಂಖ್ಯೆ 34732267085 ರಲ್ಲಿ ರೂ. 2,40,810.50 ಇರುವುದು ಗಮನಕ್ಕೆ ಬಂದಿದ್ದು, ಸದರಿ ಖಾತೆಯಲ್ಲಿ ಯಾವುದೇ ವ್ಯವಹಾರ ಇರುವುದಿಲ್ಲವಾದ್ದರಿಂದ ಖಾತೆಯನ್ನು ಮುಕ್ತಾಯಗೊಳಿಸಿ ರಾಜಸ್ವ ಖಾತೆಗೆ ವರ್ಗಾವಣೆ ಮಾಡಿ ಅನುಪಾಲನಾ ವರದಿಯನ್ನು ಸಲ್ಲಿಸಲು ತಿಳಿಸಿದೆ. ಸದರಿ ವರದಿಯನ್ನು ಸಲ್ಲಿಸುವವರೆಗೆ ಖಾತೆಯಲ್ಲಿರುವ ಮೊತ್ತ ರೂ. 2,40,810.50 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

6 ತಾತ್ಕಾಲಿಕ ಮುಂಗಡ ಹಣ ಮಾರ್ಚ-2017 ರ ಅಂತ್ಯದೊಳಗಾಗಿ ಹೊಂದಾಣಿಕೆ ಮಾಡದೇ ಇರುವ ಬಗ್ಗೆ.

ಕಾಡಾ ಹಾಗೂ ಕೆ.ಬಿ.ಜೆ.ಎನ್.ಎಲ್.ಗಳ ನಗದು ಪುಸ್ತಕಗಳನ್ನು ಪರಿಶೀಲಿಸಲಾಗಿ ನಗದು ಪುಸ್ತಕಗಳ ಅನ್ವಯ ದಿನಾಂಕ: 31-03-2017 ರ ಅಂತ್ಯಕ್ಕೆ ತಾತ್ಕಾಲಿಕ ಮುಂಗಡ ನೀಡಿದ ಹಣವು ಹೊಂದಾಣಿಕೆಯಾಗದೇ ಬಾಕಿ ಉಳಿದಿರುತ್ತದೆ. ವಿವರ ಈ ಕೆಳಗಿನಂತಿದೆ

ಕ್ರ ಸಂ	ಮುಂಗಡ ನೀಡಿದ ಕಛೇರಿ ವಿವರ	ಬಾಕಿ ಹೊಂದಾಣಿಕೆ ಯಾಗಬೇಕಾದ ಮುಂಗಡ		ಒಟ್ಟು	ಹೊಂದಾಣಿಕೆ ಯಾದಮೊತ್ತ	ಬಾಕಿ ಮೊತ್ತ
		ಕಾಡಾ	ಕೆ.ಬಿ.ಜೆ. ಎನ್.ಎಲ್.			
1	ಕಾಡಾ ಆಡಳಿತ ಕಛೇರಿ	1,13,082.00	-	1,13,082.00	47,000.00	66,082.00
2	LDTC ಭೀಮರಾಯನಗುಡಿ	38,771.00	-	38,771.00	-	38,771.00
3	EE FIC DIV. No. 02 ಹಸನಾಪುರ	1,815.00	5,766.00	7,581.00	-	7,581.00
4	EE FIC DIV. No. 01 ಅವರಾದ	50,000.00	-	50,000.00	50,000.00	-
5	ADA Sub DIV. No. 01 ಭಿಮರಾಯನಗುಡಿ	4,531.00	-	4,531.00	-	4,531.00
6	ADA Sub DIV. No. 03 ಕೃಷ್ಣಾಪುರ್	24,400.00	-	24,400.00	-	24,400.00
7	EE FIC DIV. No. 03 ಆಲಮಟ್ಟಿ	-	8,470.00	8,470.00	8,470.00	-
8	EE FIC DIV. No. 04 ಆಲಮೇಲ	-	1,40,233.00	1,40,233.00	27,033.00	1,13,200.00
		2,32,599.00	**1,54,469.00**	**3,87,068.00**	**1,32,503.00**	**2,54,565.00**

ಒಟ್ಟು ರೂ. 3,87,068=00ಗಳ ಬಾಕಿ ಮೊತ್ತ ಮಾರ್ಚ-2017ರ ಅಂತ್ಯದೊಳಗೆ ಹೊಂದಾಣಿಕೆ ಮಾಡಿರುವದಿಲ್ಲ. ನಂತರ ರೂ. 1,32,503=00 ಹೊಂದಾಣಿಕೆ ಆಗಿದ್ದು, ಬಾಕಿ ಉಳಿದ ರೂ. 2,54,565=00 ಹೊಂದಾಣಿಕೆ ಆಗುವವರೆಗೆ ರೂ. 2,54,565=00 ಗಳನ್ನು ವಸೂಲಾತಿಯಲ್ಲಿಡಲಾಗಿದೆ.

ಈ ಕುರಿತು ಆಡಿಟ್ ವಿಚಾರಣೆ ಸಂಖ್ಯೆ: 25 ದಿನಾಂಕ: 03.11.2017 ನೀಡಲಾಗಿತ್ತು.

7 ಕಡಿಮೆ ಮೊತ್ತದ ಸ್ಟ್ಯಾಂಪ್ ಪೇಪರ್ ಮೇಲೆ ಕಾಮಗಾರಿಯ ಕರಾರು ಒಪ್ಪಂದ ಮಾಡಿಕೊಂಡಿರುವ ಬಗ್ಗೆ.

ಕ್ರ ಸಂ	ಕಾಮಗಾರಿಯ ಹೆಸರು	ಇಂಡೆಂಟ್ ಸಂಖ್ಯೆ	ಕಾಮಗಾರಿಗೆ ನಗದಿಪಡಿಸಿದ ಹಣ	ಸುಪ್ತಿಗೆ ಹೊಳ್ಳಿ	ಕರಾರು ಒಪ್ಪಂದ ಮಾಡಿಕೊಂಡ ಸ್ಟ್ಯಾಂಪ್ ಪೇಪರ್ ಹೊಳ್ಳಿ	ಕರಾರು ಒಪ್ಪಂದ ಮಾಡಿಕೊಳ್ಳಬೇಕಾದ ಸ್ಟ್ಯಾಂಪ್ ಪೇಪರ್ ಹೊಳ್ಳಿ	ವ್ಯತ್ಯಾಸ (7-6=8)
1	2	3	4	5	6	7	8
1	C/o FDC/BFDC Under D-10 of SBC	1331	2991440	1739223	100	200	100
2	Imp to road SBC D-7 Yallamma Temple	1356	2487777	1283445	100	200	100

3	Imp to road Japna Naik to Kanyakollur	1355	3248293	1616026	100	200	100
4	C/o CC Road from Hulkal to Kadammanahalli	1362		3900809	300	400	100
5	Formation of Approach road from wadgera to Konkal	8554	3955911	2333987	100	300	200
6	C/o Aykat road from Mandewal to Nelogi	1437	2989133	2315133	100	200	100
7	Imp to Aykat road from Harwal to Kalahangarga	1439	9877515	5999602	100	600	500
8	Imp to road from Bilhar to High School	1359	1488884	891842	100	100	000
9	Deepening & widening of Nala in SBC dy No. 10 village Halkal (K)	9051	5763310	3901761	100	400	300
10	C/o Aykat road from sonna to Harwal	9201	2577686	1822956	100	200	100
11	Formation of road Sheettikara to Hosalkara	1354	3973573	2274147	100	300	200
12	Formation of approach road Dornalli village to Jande	1492	5966399	5055350	100	600	500
13	Formation fo road malhalli to Khanapur	1491	5931696	5186391	100	600	500
Total							**2,800**

ಈ ಮೇಲಿನ ಕಾಮಗಾರಿಗಳಲ್ಲಿ ಕರಾರು ಒಪ್ಪಂದಗಳನ್ನು ಕಡಿಮೆ ಮೊತ್ತದ ಸ್ಟ್ಯಾಂಪ್ ಪೇಪರ್‌ಗಳ ಮೇಲೆ ಮಾಡಿಕೊಂಡಿರುವುದು ಕಂಡುಬಂದಿದ್ದು ವ್ಯತ್ಯಾಸದ ಮೊತ್ತ ರೂ. 2,800=00 ಗಳನ್ನು ವಸೂಲಾತಿಯಲ್ಲಿಡಲಾಗಿದೆ. ಸುತ್ತೋಲೆ ಸಂಖ್ಯೆ:KBJNL/EDF/09/711 ದಿನಾಂಕ: 16-06-2016 ರಲ್ಲಿ in respect of works already in progress, action should be taken to enhance the stamp duty in accordance with the re-used stamp duty" ಎಂದು ಇರುತ್ತದೆ. ಆದ್ದರಿಂದ ಸೂಕ್ತ ಕ್ರಮ ಕೈಗೊಂಡು ವರದಿ ಸಲ್ಲಿಸುವುದು.

ಈ ಕುರಿತು ಆಡಿಟ್ ವಿಚಾರಣೆ ಸಂಖ್ಯೆ: 08 ದಿನಾಂಕ: 26-10-2017 ನೀಡಲಾಗಿತ್ತು.

8 ಕಾಮಗಾರಿಯನ್ನು ಮುಕ್ತಾಯಗೊಳಿಸದೆ ರೂ. 6,40,470.00ಗಳನ್ನು ಪಾವತಿಸಿ ಅನುಪಯುಕ್ತ ಹಾಗೂ ಫಲರಹಿತ ವೆಚ್ಚ ಮಾಡಿರುವ ಬಗ್ಗೆ.

1	ಕಾಮಗಾರಿಯ ಹೆಸರು	:	Construction of FIC/BFIC/and CTC/ed/ RC/nolc/of OL.1(R/S) @ch 0.20mtr of Distributary No. 25 of Marol LIS West canal
2	ಕಾಮಗಾರಿ ಗುತ್ತಿಗೆ ಮೊತ್ತ	:	ರೂ. 1,55,308.00

3	ಗುತ್ತಿಗೆದಾರರ ಹೆಸರು	:	ಶ್ರೀ ಆರ್.ಸಿ. ಕುಲಕರ್ಣಿ
4	ಅಗ್ರಿಮೆಂಟ್ ಸಂಖ್ಯೆ	:	422/2013-14 ದಿನಾಂಕ: 30.10.2013
5	ಕೆಲಸ ಪ್ರಾರಂಭಸಿದ ದಿನಾಂಕ	:	04.01.2016
6	ಕೆಲಸ ಮುಗಿಸ ಬೇಕಾದ ದಿನಾಂಕ	:	17.02.2016
7	ವಾಸ್ತವಿಕವಾಗಿ ಕೆಲಸ ಮುಗಿದ ದಿನಾಂಕ	:	03.02.2016
8	ಕಾಮಗಾರಿ ಪ್ರಸಕ್ತ ಸಾಲಿನ ವೆಚ್ಚ	:	ರೂ. 6,40,470.00

ಮೇಲಿನ ಕಾಮಗಾರಿಯ ಕರಾರು ಒಪ್ಪಂದವನ್ನು ದಿನಾಂಕ 03.10.2013 ರಂದು ಮಾಡಿಕೊಳ್ಳಲಾಗಿದ್ದು, ಕಾಮಗಾರಿಯ ಎಲ್ಲೆ ಗುರುತನ್ನು ದಿನಾಂಕ: 04.01.2016 ರಂದು ನೀಡಿ ಅದೇ ದಿವಸ ಕೆಲಸ ಪ್ರಾರಂಭಿಸಲಾಗಿದೆ.

ಕರಾರು ಒಪ್ಪಂದ ಮಾಡಿಕೊಂಡ ಸುಮಾರು ಎರಡು ವರ್ಷ ಮೂರು ತಿಂಗಳ ನಂತರ ಕಾಮಗಾರಿ ಪ್ರಾರಂಭಿಸಿರುವದಕ್ಕೆ ಕಾರಣವೇನು ತಿಳಿದುಬಂದಿರುವುದಿಲ್ಲ. ದಿನಾಂಕ: 17.02.2016 ರಂದು ಪೂರ್ತಿ ಕಾಮಗಾರಿ ಮುಗಿಸಬೇಕಾಗಿತ್ತು ಆದರೆ ಕೇವಲ ರೂ. 6,40,470.00ಗಳ ವೆಚ್ಚದ ಆರ್ಥಿಕ ಪ್ರಗತಿ ಸಾಧಿಸಿ ಕಾಮಗಾರಿ ಮುಕ್ತಾಯಗೊಳಿಸಲಾಗಿದೆ.

ಬಿಲ್ಲುಗಳನ್ನು ಪರಿಶೀಲಿಸಲಾಗಿ ದಿನಾಂಕ: 09.03.2016 ರ ಸಹಾಯಕ ಕಾರ್ಯಪಾಲಕ ಅಭಿಯಂತರರು ಹೊಲಗಾಲುವೆ ಉಪ ವಿಭಾಗ 15, ಕೃಷ್ಣಾ ಭಾಗ್ಯ ಜಲನಿಗಮ(ನಿ), ಆಲಮಟ್ಟಿ ಉಪ ವಿಭಾಗ ಇವರು ಸದರಿ ಕಾಮಗಾರಿಯನ್ನು ಮುಂದುವರಿಸಲು ಆಗದೇ ಇರುವುದನ್ನು ಮನಗಂಡು ಮತ್ತು ಗುತ್ತಿಗೆದಾರರ ಮನವಿ ಪ್ರಕಾರ ಕಾಮಗಾರಿಯನ್ನು ಯತಾಸ್ಥಿತಿಯಲ್ಲಿ ಮುಕ್ತಾಯಗೊಳಿಸಿ ಬಿಲ್ಲನ್ನು ಬರೆಯದೇ ಸಂದಾಯಕ್ಕಾಗಿ ಸಲ್ಲಿಸಿರುತ್ತಾರೆ. ಕಾಮಗಾರಿಯನ್ನು ಯತಾಸ್ಥಿತಿಯಲ್ಲಿ ಮುಕ್ತಾಯಗೊಳಿಸಲು ಯಾವುದೇ ಕಾನೂನಿನ ಚೌಕಟ್ಟಿನಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಅವಕಾಶ ಮತ್ತು ಅಧಿಕಾರ ಇರುವುದಿಲ್ಲ ಒಂದು ವೇಳೆ ಅಂತಹ ಅವಕಾಶಗಳು ಏನಾದರು ಇದ್ದರೇ ಅವುಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು.

ಕಾಮಗಾರಿಯನ್ನು ಯತಾಸ್ಥಿತಿಯಲ್ಲಿ ಮುಕ್ತಾಯಗೊಳಿಸಲು ಕೆಲವು ನಿಯಮಗಳಿದ್ದು ಅವುಗಳ ಪ್ರಕಾರ ಕ್ರಮ ತೆಗೆದುಕೊಂಡ ಬಗ್ಗೆ ಕಡತಗಳಲ್ಲಿ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. ಸದರಿ ವಿಷಯಕ್ಕೆ ಸಂಬಂಧಪಟ್ಟ ಅಗತ್ಯ ಮಾಹಿತಿಗಳನ್ನು ಲೆಕ್ಕಪರಿಶೋಧನೆಗೆ ಸಲ್ಲಿಸುವವರೆಗೆ ಪಾವತಿಸಲಾದ ಮೊತ್ತ ರೂ. 6,40,470/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಈ ಕುರಿತು ಆಡಿಟ್ ವಿಚಾರಣೆ ಸಂಖ್ಯೆ: 14 ದಿನಾಂಕ: 30-10-2017 ನೀಡಲಾಗಿತ್ತು.

9 Use of Standard Tender Documents in Procurement of work reg.

ಟೆಂಡರ್ ಪ್ರಕ್ರಿಯೆಯಲ್ಲಿ Standard Tender Document ಗಳನ್ನು ಉಪಯೋಗಿಸಲು ಸರ್ಕಾರದ ಆದೇಶ ಸಂಖ್ಯೆ: FD9 PCL 2004 (I) ದಿನಾಂಕ: 06-08-2005 ರಲ್ಲಿ ಕೆಲವೊಂದು ವಿಭಾಗಗಳಲ್ಲಿ ಉಪಯೋಗಿಸಲು ಆದೇಶಿಸಲಾಯಿತು. ನಂತರ ದಿನಾಂಕ: 21-03-2007 ರಲ್ಲಿ ಕೆಲವೊಂದು ಮಾರ್ಪಾಡುಗಳೊಂದಿಗೆ ಸದರಿ ಆದೇಶವನ್ನು ಸರ್ಕಾರದ ಎಲ್ಲಾ Procurement ಗಳಲ್ಲಿ ಅಳವಡಿಸಿಕೊಳ್ಳಲು ಕಡ್ಡಾಯಗೊಳಿಸಲಾಯಿತು. ನಂತರದ ಅವಧಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: FD6 PCL 2006 ದಿನಾಂಕ: 21-03-2007, ಆದೇಶ ಸಂಖ್ಯೆ: FD04 PCL 2006 ದಿನಾಂಕ:12-07-2007, & ದಿನಾಂಕ: 02-04-2008, ಆದೇಶ ಸಂಖ್ಯೆ: FD 1 PCL 2010 ದಿನಾಂಕ: 23-09-2010, ಆದೇಶ ಸಂಖ್ಯೆ: FD 480 EXP 12/2014 ದಿನಾಂಕ: 19-07-2014 ಗಳನ್ವಯ ಸದರಿ ನಿಯಮಗಳನ್ನು ಟೆಂಡರ್ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳಲು

ಸತತವಾಗಿ/ನಿರಂತರವಾಗಿ ಸರ್ಕಾರದ ಆದೇಶ/ಸುತ್ತೋಲೆಗಳನ್ನು ಸರ್ಕಾರದಿಂದ ಹೊರಡಿಸಲಾಯಿತು. ಆದರೆ ಕೃಷ್ಣಾ ಕಾಡಾ ಭೀಮರಾಯನಗುಡಿ ಅಡಿಯಲ್ಲಿ ಬರುವ ಯಾವುದೇ ಕಾಮಗಾರಿಗಳಲ್ಲಿ ಸದರಿ Standard Tender Document ಗಳನ್ನು ಟೆಂಡರ್ ಪ್ರಕ್ರಿಯೆಯಲ್ಲಿ ಅಳವಡಿಸಿಕೊಂಡಿರುವುದು ಲೆಕ್ಕಪರಿಶೋಧನೆಯ ಗಮನಕ್ಕೆ ಬಂದಿರುವುದಿಲ್ಲ. ಕಾಡಾ ವತಿಯಿಂದ ಈ ಕೆಳಗಿನ ಲೆಕ್ಕಶೀರ್ಷಿಕೆಗಳಲ್ಲಿ ವಿವರಿಸಿರುವಂತೆ ವೆಚ್ಚಗಳನ್ನು ಭರಿಸಲಾಗಿದ್ದು, ಈ ಎಲ್ಲಾ ವೆಚ್ಚಗಳನ್ನು ಸದರಿ ಸರ್ಕಾರದ ಆದೇಶ/ಸುತ್ತೋಲೆಗಳನ್ನು ಪರಿಗಣಿಸದೇ ಭರಿಸಿರುವುದು ನಿಯಮಬಾಹಿರ ಪಾವತಿಗಳಾಗಿವೆ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಪಡಲಾಗಿದೆ.

1	Aycut Roads	ರೂ.	131.61 ಲಕ್ಷ
2	FIC	ರೂ.	506.96 ಲಕ್ಷ
3	FDC	ರೂ.	150.37 ಲಕ್ಷ
4	Land Reclaimation	ರೂ.	1348.56 ಲಕ್ಷ
5	NABARD	ರೂ.	5132.76 ಲಕ್ಷ
6	SDP	ರೂ.	2857.05 ಲಕ್ಷ
7	KBJNL Fund	ರೂ.	1681.77 ಲಕ್ಷ
8	RIDF XX	ರೂ.	996.00 ಲಕ್ಷ

ಪ್ರಯುಕ್ತ Standard Tender Document ಗಳನ್ನು ಟೆಂಡರ್ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳದೇ ಇರುವುದಕ್ಕೆ ಸ್ಪಷ್ಟೀಕರಣ ಕುರಿತು ಆಡಿಟ್ ವಿಚಾರಣೆ ಸಂಖ್ಯೆ: 26 ದಿನಾಂಕ: 3-11-2017 ನೀಡಲಾಗಿತ್ತು.

10 ಕರಾರು ಒಪ್ಪಂದ ಮಾಡಿಕೊಳ್ಳುವಾಗ Security Deposit ಪಡೆಯದೇ ನಂತರ ಬಿಲ್ಲಿನಲ್ಲಿ ಕಡಿತಗೊಳಿಸಿದ ಬಗ್ಗೆ.

2015-16ನೇ ಸಾಲಿನಲ್ಲಿ KBJNL FIC Division No.1 Award ವಿಭಾಗದಲ್ಲಿ ಪಾಸು ಮಾಡಿದ ಬಿಲ್ಲುಗಳಿಗೆ FSD ಯನ್ನು ಬಿಲ್ಲುಗಳಲ್ಲಿ ಕಟಾಯಿಸಲಾಗಿದೆ. ವಿವರ ಕೆಳಗಿನಂತೆ ಇರುವುದು.

Sl No	Voucher No & Date	Name of the work	Estimate Amount/ Contract Value	FSD Deducted
1)	153 Dated: 30-03-2017	Improvement to Road from Aldal Village to Kakkasgera to SBC Main Canal 0 to 4.00	90.00 Lakh (Est) 48.37 (Contract Value)	2,32,818=00
2)	160 Dated: 31-03-2017	Improve to Road from Anabi to Maradagi km 0.00 to 4.50 in Shahapur Tq.	109.19 (amnt Put Tender) 73.16 Contrator Value	1,21,890=00
3	161 Dated: 31-03-2017	Construction & improvements to Ayacut road from Nelogi to Hippargi 0.00 to 3.00 in Jewargi Tq.	99.00 Est Cost 59.76 Contract Value	60,794=00

Tender document (Indent No. 1441) Additional Conditions ನ ಪ್ರಕಾರ Security Deposit ಗೆ ಸಂಬಂಧಿಸಿದಂತೆ "As per Executive Director of finance letter M 324 Date: 09.08.2013 Condition Clause 20 has been amended vide govt order No. FD 4 PCL 2008 Dated: 14.10.2008 as "within 20 days of the receipt of the letter of acceptance the successive tender shall deliver to the employer a security deposite in any of the forms given 5% of Contract Price" ಎಂದು ಇರುತ್ತದೆ. ಹೀಗಾಗಿ ಒಪ್ಪಂದದ ಕರಾರು ಪತ್ರಗಳನ್ನು ಮಾಡಿಕೊಳ್ಳುವ ಮುಂಚೆ Security Deposit ಪಡೆದಿರುವದಿಲ್ಲ. ಸದರಿ ಷರತ್ತು ಉಲ್ಲಂಘನೆಯಾಗಿರುತ್ತದೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸೂಕ್ತ ದಾಖಲಾತಿಗಳೊಂದಿಗೆ ಲೆಕ್ಕಪರಿಶೋಧನೆಗೆ ಸ್ಪಷ್ಟೀಕರಣ ನೀಡಲು ಸೂಚಿಸಲಾಗಿದೆ.

ಈ ಕುರಿತು **ಆಡಿಟ್ ವಿಚಾರಣೆ ಸಂಖ್ಯೆ: 12 ದಿನಾಂಕ: 26.10.2017** ನೀಡಲಾಗಿತ್ತು.

11 2016-17ನೇ ಸಾಲಿನಲ್ಲಿ ಹೊಲಗಾಲುವೆ ವಿಭಾಗ-1, ಅವರಾದ ಅಡಿ ಕೈಗೊಂಡ ಕಾಮಗಾರಿಗಳ ಕುರಿತು.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ 17 ಕಾಮಗಾರಿಗಳಲ್ಲಿ ಟೆಂಡರ್ ನಿಯಮಾವಳಿಗಳನ್ವಯ Additional performance Security (ಅಂದರೆ ವ್ಯತ್ಯಾಸದ ಮೊತ್ತ) ಹಾಗೂ Furher security Deposit (ಭದ್ರತಾ ಠೇವಣಿ)ಗಳನ್ನು ಗುತ್ತಿಗೆದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳುವ ಮೊದಲೇ ಪಡೆಯಬೇಕು. ಆದರೆ ಓಚರ್‌ಗಳನ್ನು ಪರಿಶೀಲಿಸಲಾಗಿ ಕಾಮಗಾರಿಗಳ ಬಿಲ್ಲುಗಳಲ್ಲಿ FSD ಹಣ ಕಟಾಯಿಸಿರುವುದು ಕಂಡು ಬಂದಿರುತ್ತದೆ. ಇದು ನಿಯಮಾವಳಿಗಳ ವಿರುದ್ಧವಾಗಿರುತ್ತದೆ. (As per 25.5 of standard Tender Document & Clause 44 of conditions of contract) ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಲ್ಲಿ ರೂ. 2,40,33,953.00ಗಳ Additional performance Security ಪಡೆದಿದ್ದರೆ. ಅವುಗಳ ವಿವರಗಳನ್ನು ನೀಡಲು ತಿಳಿಸಿದೆ ಮತ್ತು FSD ಮೊತ್ತವನ್ನು ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿಯೇ ಏಕೆ ಪಡೆದಿರುವುದಿಲ್ಲ ಎಂಬುದಕ್ಕೆ ಸಕಾರಣ ವಿವರಣೆ ನೀಡುವುದು. ಅಲ್ಲಿಯವರೆಗೆ ಒಟ್ಟು ಮೊತ್ತ **ರೂ. 2,40,33,953.00 + 25,98,363.00 = 2,66,32,316.00 ಗಳನ್ನು ವಸೂಲಾತಿಯಲ್ಲಿ** ಏಕೆ ಇಡಬಾರದು ಎಂಬುದಕ್ಕೆ ವಿವರಣೆ ಸಲ್ಲಿಸುವುದು.

ಕ್ರ.ಸಂ.	ಕಾಮಗಾರಿಯ ಹೆಸರು	ಟೆಂಡರ್ ಸಂಖ್ಯೆ	ಕಾಮಗಾರಿಗೆ ಒಂದಾದ ಬಿಲ್ಲು	ಬಿಲ್ಲು ಸಂಖ್ಯೆ	Additional Performance Security ಪಡೆಯ ಬೇಕಾಗಿದ್ದು	ಪಡೆಯ ಬೇಕಾಗಿದ್ದ
1	**2**	**3**	**4**	**5**	**6**	**7**
1	C/o FDC/BFDC Under D-10 of SBC	1331	2991440	1739223	1252217	104353
2	Imp to road SBC D-7 Yallamma Temple	1356	2487777	1283445	1204332	770077
3	Imp to road Sophisab Darga to Dariyapur	1352	3992151	1991284	2000867	119477
4	Imp to road Japna Naik to Kanyakollur	1355	3248293	1616026	1632267	96962
5	Imp to road Shahapur Sindgi to Chamnal Kembhavi	1363	4999390	2457337	2542053	159727
6	Formation of Approach road from wadgera to Konkal	8554	3955911	2333987	1621924	140039

7	C/o Aykat road from Madewal to Nelogi	1437	2989133	2315133	674000	150484
8	Imp to Ayent road from Horwal to Kalahanganga	1439	9877515	5999602	3877913	359976
9	Imp to road from Bilhar to High School	1359	1488884	891842	597042	44592
10	Deepening & widening of Nala in SBC dy No. 10 village Halkal (K)	9051	5763310	3901761	1861549	253614
11	C/o Aycat road from sonna to Harwal	9201	2577686	1822956	754730	109377
12	Formation of road Sheettikara to Hosalkara	1354	3973573	2274147	1699426	147820
13	Formation of approach road Dornalli village to Jande	1492	5966399	5055350	911049	328598
14	Imp to road SBC Dy-7 Yallamma Temple	1356	2487777	1283444	1204333	77007
15	Formation of road Markal to Birnoor village	1358	2991870	1536924	1454946	92215
16	Formation fo road malhalli to Khanapur	1491	5931696	5186391	745305	337115
				Total	**24033953**	**2598363**

ಈ ಕುರಿತು ವಿವರಣೆಯನ್ನು ನೀಡುವಂತೆ **ಆಡಿಟ್ ವಿಚಾರಣೆ ಸಂಖ್ಯೆ:10 ದಿನಾಂಕ: 26-10-2017** ನೀಡಲಾಗಿದೆ. ಅದಕ್ಕೆ ಉತ್ತರವಾಗಿ ಸಿ.ಎ.ಓ. ಭೀಗುಡಿ ಇವರು ಅನುಪಾಲನ ವರದಿಯನ್ನು ಸಲ್ಲಿಸಿದ್ದು ಕೆ.ಬಿ.ಜೆ. ಎನ್.ಎಲ್. ಸ್ಟಾಂಡರ್ಡ್ ಡಾಕ್ಯೂಮೆಂಟ್‌ನಲ್ಲಿ ಎಫ್.ಎಸ್.ಡಿ. ಮುಂಗಡವಾಗಿ ಪಡೆಯಲು ತಿಳಿಸಲಾಗಿರುವುದಿಲ್ಲ. ಕಾರಣ ಎಫ್.ಎಸ್.ಡಿ. ಮುಂಗಡ ಪಡೆದಿರುವುದಿಲ್ಲ. ಮುಂದುವರೆದು ಚಾಲ್ತಿಬಿಲ್ಲುಗಳಲ್ಲಿ ಕಟಾಯಿಸಿದ ವಿವರಗಳನ್ನು ಸಲ್ಲಿಸಿರುತ್ತಾರೆ. ಕಾಡಾ ಕಾಮಗಾರಿಗಳಲ್ಲಿ ಎ.ಪಿ.ಎಸ್. ಪೂರ್ತಿಯಾಗಿ ಪಡೆದುಕೊಳ್ಳದೇ 10% ಕಡಿಮೆ ಎ.ಪಿ.ಎಸ್. ಪಡೆಯಲಾಗಿದ್ದು, ಅದನ್ನು ಸಂಬಂಧಪಟ್ಟ ಗುತ್ತಿಗೆದಾರರಿಂದ ವಸೂಲಾತಿ ಮಾಡಲು ಸೂಚಿಸಲಾಗಿದೆ. ಹಾಗೂ ಮುಂಬರುವ ಕಾಮಗಾರಿಗಳಲ್ಲಿ ಕರಾರು ಒಪ್ಪಂದ ಸಮಯದಲ್ಲಿ ಮುಂಗಡವಾಗಿ ಎಫ್.ಎಸ್.ಡಿ. ಪಡೆಯುವುದು ಹಾಗೂ ಅವಶ್ಯವಿದ್ದ ಕಾಮಗಾರಿಗಳಲ್ಲಿ ಶತಪ್ರತಿಶತ ಎ.ಪಿ.ಎಸ್.ಅನ್ನು ಪಡೆಯಲು ಸೂಚಿಸಲಾಗಿದೆ.

12 ನಿಯಮಗಳನ್ವಯ Liquidated Damages ವಸೂಲಾತಿಸದೇ Nominal penalty ಹಾಕಿರುವ ಬಗ್ಗೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಈ ಕೆಳಗಿನ ಕಾಮಗಾರಿಗಳಲ್ಲಿ ಕೆ.ಪಿ.ಡಬ್ಲ್ಯೂ.ಡಿ. ನಿಯಮ 196(6) ಮತ್ತು 196(7) ರಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳದೆ, ಗ್ರಾಮಸ್ಥರು ಕಾಮಗಾರಿಯನ್ನು ತಡೆಹಿಡಿದಿದ್ದರೆಂಬ ಕಾರಣ ನೀಡಿ Nominal penalty ಹಾಕಿರುವುದು ನಿಯಮಬಾಹಿರವಾಗಿದೆಯಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಪಡಲಾಗಿದೆ. ಈ ಸಂಬಂಧ ಗುತ್ತಿಗೆದಾರನು ಅವಧಿ ವಿಸ್ತರಣೆಗಾಗಿ ಹಾಗೂ ಗ್ರಾಮಸ್ಥರು ಕೆಲಸ ತಡೆಹಿಡಿದಿದ್ದಾರೆಂಬ ಬಗ್ಗೆ ದೂರು ನೀಡಿದ ಪತ್ರಗಳ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಸಲ್ಲಿಸುವುದು. ಮತ್ತು ಈ ಕುರಿತು ಇಲಾಖಾವತಿಯಿಂದ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ ಬಗ್ಗೆ ವಿವರ ನೀಡುವುದು. ಅಲ್ಲಿಯವರೆಗೆ 2016-17ನೇ ಸಾಲಿನಲ್ಲಿ ಪಾವತಿಸಿದ **ರೂ. 44,22,117.00 ಗಳನ್ನು ಆಕ್ಷೇಪಣೆಯಲ್ಲಿ ಇಡಲಾಗಿದೆ.**

ಕ್ರ.ಸಂ.	ಕಾಮಗಾರಿಯ ಹೆಸರು	ಇಂಡೆಂಟ್ ಸಂಖ್ಯೆ	ಕಾಮಗಾರಿಗೆ ಇಟ್ಟ ಹೊಂದಾಣಿಕೆ ಹೊಂದಾಣಿಕೆ	ಬಿಲ್ಲಿನ ಹೊಂದಾಣಿಕೆ	Date of Markout / Agreement	Probable Date of Completion	Date of Completion	Delay	Rate of Penalty	Penalty Imposed
1	**2**	**3**	**4**	**5**	**6**	**7**	**8**	**9**	**10**	**11**
1	Deepening & widening of Nala in SBC dy No. 10 village Halkal (K)	9051	5763310	372395	25-06-2015	24-09-2015	19-10-2016	404	15	6060
2	C/o Aycat road from sonna to Harwal	9201	2577686	1820963	11-03-2016	10-06-2016	22-09-2016	103	15	1545
3	Formation of road Sheettikara to Hosalkara	1354	3973573	132774	26-02-2016	25-06-2016	25-10-2016	153	20	3060
4	Formation of Approach road wadagera to Konkal	8554	3955911	2295985		28-06-2016	ಈ ಕಾಮಗಾರಿಯು ದಿನಾಂಕ: 28-06-2016 ರಂದು ಮುಕ್ತಾಯ-ವಾಗಬೇಕಾಗಿತ್ತು ಆದರೆ ಸದರಿ ದಿನಾಂಕದಂದು ತೆಗೆದುಕೊಂಡ ಅಳತೆಗಳನ್ವಯ ರೂ. 22,95,985.00 ಗಳ ಕಾಮಗಾರಿ ಮಾತ್ರ ಆಗಿರುತ್ತದೆ			

ಈ ಕುರಿತು ವಿವರಣೆಯನ್ನು ನೀಡುವಂತೆ **ಆಡಿಟ್ ವಿಚಾರಣೆ ಸಂಖ್ಯೆ: 09 ದಿನಾಂಕ: 26-10-2017** ನೀಡಲಾಗಿದೆ. ಉತ್ತರವಾಗಿ ಮುಖ್ಯ ಲೆಕ್ಕಾಧಿಕಾರಿಗಳು, ಕಾಡಾ, ಭೀಗುಡಿಯವರು ಇಲಾಖಾ ಸಂಹಿತೆ ಅಡಿಯಲ್ಲಿ ಪ್ರದತ್ತವಾದ ಅಧಿಕಾರದ ಪ್ರಕಾರ ದಂಡವಿಧಿಸಲಾಗಿದ್ದು, ಮತ್ತು ಕಾಮಗಾರಿಗಳು ವ್ಯಾಜ್ಯಗಳಿಂದಾಗಿ ನಿರ್ವಹಣೆಯಲ್ಲಿ ಕಂತವಾಗಿದ್ದು ರೈತರಜೋತೆ ಸಮಾಲೋಚಿಸಿ ಮನವೊಲಿಸಿ ಕಾಮಗಾರಿ ಕೈಗೊಳ್ಳುವಲ್ಲಿ ವಿಳಂಬವಾಗಿರುವುದರಿಂದ ಕನಿಷ್ಟ ದಂಡವಿಧಿಸಿ ಅವಧಿ ವಿಸ್ತರಣೆಯನ್ನು ನೀಡಿರುವುದಾಗಿ ತಿಳಿಸಿರುತ್ತಾರೆ.

ಲೆಕ್ಕಪರಿಶೋಧನೆ ಅಭಿಪ್ರಾಯದನ್ವಯ ಯಾವುದೇ ವ್ಯಾಜ್ಯಗಳು ಇದ್ದಲ್ಲಿ ತತ್ಸಂಬಂಧಿತ ದಾಖಲೆಗಳು ಕಡತದಲ್ಲಿ ಲಭ್ಯ ಇರದೇ ಇರುವುದರಿಂದ ಸದರಿ ಕಾಮಗಾರಿಗಳು ನಿರ್ವಹಣೆಯಲ್ಲಿ ತೊಂದರೆಯಾಗದೇ ಇರುವುದನ್ನು ಗಮನಿಸಲಾಗಿದೆ. ಇನ್ನು ಮುಂದೆ ಸ್ಟಾಂಡರ್ಡ್ ಡಾಕ್ಯೂಮೆಂಟ್‌ಗಳಲ್ಲಿ Liquidated Damages ಕ್ಲಾಸ್ ಅಳವಡಿಸಿಕೊಳ್ಳಲು ಸೂಚಿಸಲಾಗಿದೆ.

13 ನಗದು ಪುಸ್ತಕ ಹಾಗೂ ಬ್ಯಾಂಕ್ ಪಾಸಬುಕ್‌ನ ಅಂಕಿಅಂಶಗಳಲ್ಲಿ ಲೆಕ್ಕ ಸಮನ್ವಯ ಮಾಡದೇ ಇರುವದರಿಂದ ವ್ಯತ್ಯಾಸ ಕಂಡುಬಂದಿರುವ ಬಗ್ಗೆ.

ಪಾಸಬುಕ್ ಬ್ಯಾಂಕ್ ಖಾತೆ ಸಂಖ್ಯೆ: 52187860160 ನ್ನು ಬ್ಯಾಂಕ್ ಸ್ಟೇಟಮೆಂಟ್ ಹಾಗೂ ನಗದು ಪುಸ್ತಕದೊಂದಿಗೆ ತಾಳೆ ನೋಡಲಾಗಿದ್ದು ಈ ಕೆಳಗಿನಂತೆ ಹೊಂದಾಣಿಕೆಯಾಗಿರುವುದಿಲ್ಲ.

1)	ನಗದು ಪುಸ್ತಕದ ಪ್ರಕಾರ ಕೊನೆಯ ಶಿಲ್ಕು	ರೂ. 22,22,12,127=00
2)	ಬ್ಯಾಂಕ್ ಸ್ಟೇಟಮೆಂಟ್ ಪ್ರಕಾರ ಕೊನೆಯ ಶಿಲ್ಕು	ರೂ. 40,60,35,013=00
	ಒಟ್ಟು ವ್ಯತ್ಯಾಸ	ರೂ. **18,38,22,886=00**
	ನಗದೀಕರಣಗೊಳ್ಳದ ಚೆಕ್‌ಗಳ ಮೊತ್ತ	ರೂ. 18,09,46,876=00
	ಬ್ಯಾಂಕ್ ಖಾತೆಯಲ್ಲಿ ಜಮೆ ಆದ ಸ್ವೀಕೃತಿಗಳನ್ನು ನಗದು ಪುಸ್ತಕದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳದೇ ಇರುವ ಮೊತ್ತ.	ರೂ. 28,76,010=00

1 ಹೀಗಾಗಿ ಪಾಸ್‌ಬುಕ್ ಹಾಗೂ ಕ್ಯಾಶಬುಕ್ Closing Balance ಗೆ ತಾಳೆಯಾಗಿರುವದಿಲ್ಲ. ಕಾರಣ ಪಾಸು ಬುಕ್‌ನಲ್ಲಿ ಜಮಾ ಆದ Receipts ರೂ. 28,76,01000 ಗಳ ವಿವರವಾದ ಯಾದಿಯನ್ನು ತಯಾರಿಸಿ ಅವುಗಳನ್ನು Cash book Entry ತೆಗೆದು ಕೊಂಡು, ಮರು ಸಮನ್ವಯ ಮಾಡಿ ಪುನಃ ಲೆಕ್ಕಪರಿಶೋಧನೆಗೆ ಸಲ್ಲಿಸಲು ಸೂಚಿಸಲಾಗಿದೆ

2 2014 ರಿಂದ 2016 ರ ವರೆಗೆ ಚೆಕ್ ವಿತರಣೆ ಮಾಡಿದ್ದು ಅವುಗಳು 32017ರ ವರೆಗೂ Encash ಆಗಿರುವದಿಲ್ಲ ವಿವರ ಈ ಕೆಳಗಿನಂತೆ ಇರುತ್ತದೆ

ಕ್ರ ಸಂ	**Cheques No.**	ದಿನಾಂಕ	ಮೊತ್ತ
1)	370110	29-03-2014	3,17,000.00
2)	834475	16-10-2015	300.00
3)	834476	27-01-2016	300.00
4)	830262	21-03-2016	10,855.00
5)	246032	05-08-2016	22,873.00
6)	246037	05-08-2016	1,800.00
7)	360996	08-09-2016	20,608.00
8)	456876	14-11-2016	40,000.00
9)	456939	31-12-2016	3,04,000.00
			7,17,736.00

ಸದರಿ ಚೆಕ್‌ಗಳ ಸಿಂಧುತ್ವ ಅವಧಿ ಮೂರು ತಿಂಗಳು ಇದ್ದು ಅವುಗಳನ್ನು ರದ್ದುಪಡಿಸಿ ನಗದು ಪುಸ್ತಕದ ಸ್ವೀಕೃತಿಯಡಿ ಲೆಕ್ಕಕ್ಕೆ ತೆಗೆದುಕೊಳ್ಳದೇ ಇರುವುದಕ್ಕೆ ಸ್ಪಷ್ಟೀಕರಣ ನೀಡುವುದು.

ಬ್ಯಾಂಕ್ ಖಾತೆ ಸಂಖ್ಯೆ (1) 52187866480 ಮತ್ತು (2) 52187866491 ಗಳಿಗೆ ಸಂಬಂಧಿಸಿದಂತೆ ನಗದು ಪುಸ್ತಕ ನಿರ್ವಹಿಸಿರುವುದಿಲ್ಲ. ಅಲ್ಲದೇ ಬ್ಯಾಂಕ್ ಖಾತೆಯೊಂದಿಗೆ ಮರುಸಮನ್ವಯ ಮಾಡಿರುವುದಿಲ್ಲ. ಕೂಡಲೇ ನಗದು ಪುಸ್ತಕವನ್ನು ನಿರ್ವಹಿಸಿ ಮತ್ತು ಮರುಸಮನ್ವಯ ಮಾಡಿ ಲೆಕ್ಕಪರಿಶೋಧನೆಗೆ ಸಲ್ಲಿಸುವಂತೆ ಕುರಿತು **ಆಡಿಟ್ ವಿಚಾರಣೆ ಸಂಖ್ಯೆ: 02 ದಿನಾಂಕ: 24-10-2017** ನೀಡಲಾಗಿದೆ. ಮುಖ್ಯ ಲೆಕ್ಕಾಧಿಕಾರಿಗಳು, ಕಾಡಾ, ಭೀಗುಡಿ ಇವರು ರೂ. 28,76,010/-ಗಳನ್ನು ಕಾಡಾ ನಗದು ಪುಸ್ತಕ ವಾಲುಂ 76 ಪುಟ ಸಂಖ್ಯೆ:58 ರಲ್ಲಿ ನಮೂದಿಸಲಾಗಿದೆ ಎಂದು ಮತ್ತು ಉಳಿದ ರೂ. 1,44,586/-ಗಳಿಗೆ ಬ್ಯಾಂಕ್ ಜೊತೆ ಮರುಸಮನ್ವಯ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದ್ದು ಹಾಗೂ ಸ್ವೀಕೃತಿ ಲೆಕ್ಕ ಖಾತೆಗೆ ನಗದು ಪುಸ್ತಕ ನಿರ್ವಹಿಸಲಾಗುವುದೆಂದ್ದು ಉತ್ತರವನ್ನು ನೀಡಿರುತ್ತಾರೆ. ಮತ್ತು Encash ಚೆಕ್ಕುಗಳು ರದ್ದುಗೊಳಿಸಿ ಹೊಸ ಚೆಕ್ಕುಗಳನ್ನು ನೀಡಿರುವುದಾಗಿ ತಿಳಿಸಿರುತ್ತಾರೆ. ಚೆಕ್ಕಗಳನ್ನು ರದ್ದು ಪಡಿಸಿದ ನಂತರ ಸಂಬಂಧಪಟ್ಟ ಖಾತೆಯ ನಗದು ಪುಸ್ತಕದ ಸ್ವೀಕೃತಿಗೆ ತೆಗೆದುಕೊಂಡು ಬೇರೆ ಚೆಕ್ ವಿತರಣೆ ಮಾಡಬೇಕಾಗಿರುತ್ತದೆ. ಈ ರೀತಿ ಮಾಡಿರುವ ವ್ಯವಹಾರಗಳನ್ನು ಮುಂದಿನ ವರ್ಷದ ಲೆಕ್ಕಪರಿಶೋಧನೆ ಸಮಯದಲ್ಲಿ ಹಾಜರು ಪಡಿಸುವಂತೆ ಸೂಚಿಸಲಾಗಿದೆ.

14 ಬಾಡಿಗೆ ಆಧಾರದ ಮೇಲೆ ವಾಹನ ಪಡೆದುಕೊಂಡಿರುವ ಬಗ್ಗೆ.

ಕೃಷ್ಣಾ ಕಾಡಾ, ಭೀಮರಾಯನಗುಡಿ ಅಧೀನದಲ್ಲಿ ಬರುವ ವಿಭಾಗ ಉಪವಿಭಾಗಗಳಿಗೆ ವಾಹನ ಸೌಲಭ್ಯ ಒದಗಿಸಲು ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಪಡೆದು ಬಿಲ್ಲುಗಳನ್ನು ಪಾವತಿಸಿದ್ದು, ಅವುಗಳ ವಿವರ ಈ ಕೆಳಗಿನಂತಿದೆ.

ಕ್ರ. ಸಂ.	ಬಾಡಿಗೆ ವಾಹನದ ಸಂಖ್ಯೆ		2016-17ನೇ ಸಾಲಿನಲ್ಲಿ ಒಟ್ಟು ಪಾವತಿ (ರೂ. 24,995- ಪ್ರತಿ ಮಾಹೆಗೆ)
01.	KA-28 C-4396	ರೂ.	2,99,940.00
02.	KA-33 A-6302	ರೂ.	2,99,940.00
03.	KA-41 1692	ರೂ.	2,99,940.00
04.	KA-02 AD-7168	ರೂ.	2,99,940.00
05.	KA-28 8712	ರೂ.	2,99,940.00
06.	KA-33 4789	ರೂ.	2,99,940.00
07.	KA-33 8146	ರೂ.	2,99,940.00
08.	KA-33 8742	ರೂ.	2,99,940.00
	ಒಟ್ಟು	ರೂ.	**23,99,520.00**

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಅಧಿನಿಯಮ 1999ರ ಪ್ರಕರಣ 4 ಇ ಹಾಗೂ ಕಲಂ 5 ರಂತೆ ರೂ. 1.00 ಲಕ್ಷ ಹಾಗೂ ಹೆಚ್ಚಿನ ಮೊತ್ತಕ್ಕೆ ಟೆಂಡರ್ ಪ್ರಕ್ರಿಯೆ ಮೂಲಕ ವಾಹನ ಬಾಡಿಗೆ ಸೌಲಭ್ಯವನ್ನು ಪಡೆಯಬೇಕಾಗಿರುತ್ತದೆ. ಆದರೆ ಸದರಿ ವಿಭಾಗ/ಉಪವಿಭಾಗದವರು ಟೆಂಡರ್ ಪ್ರಕ್ರಿಯೆ ಕೈಗೊಳ್ಳದೇ ನೇರವಾಗಿ ದರಪಟ್ಟಿ ಮೂಲಕ ವಾಹನ ಸೌಲಭ್ಯವನ್ನು ಪಡೆದುಕೊಂಡು ರೂ. 23,99,520/-ಗಳನ್ನು ಪಾವತಿ ಮಾಡಲಾಗಿರುತ್ತದೆ. ಪ್ರಯುಕ್ತ ಪಾವತಿಯಾದ ರೂ. 23,99,520/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಈ ಕುರಿತು ಆಡಿಟ್ ವಿಚಾರಣೆ ಸಂಖ್ಯೆ: 11 ದಿನಾಂಕ: 27-10-2017 ನೀಡಲಾಗಿದ್ದು. ಉತ್ತರದಲ್ಲಿ ನೀಡಿರುವ ಸಮಜಾಯಿಸಿ ತೃಪ್ತಿಕರವಾಗದೇ ಇರುವುದರಿಂದ ನಿಖರ ಮತ್ತು ದೃಢೀಕೃತ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಿ ಕಂಡಿಕೆಯನ್ನು ಮುಂದುವರಿಸಲಾಗಿದೆ.

15 2016-17ನೇ ಸಾಲಿನ ಅಧಿಕಾರಿ/ಸಿಬ್ಬಂದಿಯವರ ಆದಾಯ ತೆರಿಗೆ ಲೆಕ್ಕದ ತಃಖ್ತೆಯಲ್ಲಿ ಮನೆಬಾಡಿಗೆ ಮೊತ್ತವನ್ನು ವಿನಾಯತಿ ನೀಡಿರುವ ಬಗ್ಗೆ.

ಕೃಷ್ಣಾ ಕಾಡಾ, ಭೀಮರಾಯನಗುಡಿ ಅಧೀನದಲ್ಲಿ ಬರುವ ವಿಭಾಗ/ಉಪವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ 2016-17ನೇ ಸಾಲಿನ ಆದಾಯ ತೆರಿಗೆ ಲೆಕ್ಕದ ತಃಖ್ತೆ (Income Tax Calculation Sheet) ಅನ್ನು ಪರಿಶೀಲಿಸಿದಾಗ, HRA ವಿನಾತಿಯನ್ನು U/S 10(13)(A)ರಲ್ಲಿ ಪಡೆದಿರುವ ಬಗ್ಗೆ ನಮೂದಿಸಿದ್ದು, ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ಅಧಿಕಾರಿ/ಸಿಬ್ಬಂದಿ	ಕೇರಿ		ವಿನಾಯತಿ ಪಡೆದ ಮೊತ್ತ
01.	ಅಜೀಜ ನಬಿಸಾಬ AEE	AEE Sub-Div-6 ಕೃಷ್ಣಾಪುರ	ರೂ.	16,628=00
02.	ಮುನೀರ್ ಅಹ್ಮದ ಎಂ. AE	--------ಅದೇ--------	ರೂ.	18,300=00
03.	ಶರಣರೆಡ್ಡಿ ಪಾಟೀಲ JE	--------ಅದೇ--------	ರೂ.	27,150=00
04.	ಸೂಗಪ FDA	--------ಅದೇ--------	ರೂ.	17,748=00
05.	ಕೆ.ಗುರಲಿಂಗಪ AE	--------ಅದೇ--------	ರೂ.	23,040=00
06.	ಜೆ.ಎನ್. ಅನಿಲ್‌ರಾಜ್ AEE	AEE Sub-Div-8 ಮರಸಕಲ್	ರೂ.	72,037=00
07.	ಎಸ್.ಗೋಪಾಲಕೃಷ್ಣಾ AE	--------ಅದೇ--------	ರೂ.	45,090=00
08.	ರವಿ ಡಿ.ಎನ್. AE	--------ಅದೇ--------	ರೂ.	27,660=00
09.	ಮಹ್ಮದ ಹಬೀಬ SDA	--------ಅದೇ--------	ರೂ.	19,920=00
10.	ಸಿದ್ದಯ್ಯ ಆರ್.ಸ್ಥಾವರ್‌ಮಠ Tracer	--------ಅದೇ--------	ರೂ.	26,040=00
11.	ಸೈಯದ್ ಗೌಸುದ್ದೀನ್ Work Insp.	--------ಅದೇ--------	ರೂ.	26,127=00
		ಒಟ್ಟು	**ರೂ.**	**3,19,740=00**

ಒಟ್ಟು ರೂ. 3,19,740=00ಗಳ ಮನೆ ಬಾಡಿಗೆ ಭತ್ಯೆ ಮೊತ್ತವು ಸದರಿಯವರ ವೇತನದಲ್ಲಿ ಕಡಿತಗೊಂಡಿರುವದಿಲ್ಲ ಮತ್ತು ಸದರಿಯವರು ಬಾಡಿಗೆ ಆಧಾರದ ಮೇಲೆ ಮನೆ ಪಡೆದುಕೊಂಡಿರುವ ಬಗ್ಗೆ ಬಾಡಿಗೆ ಪ್ರಮಾಣ ಪತ್ರ ಲಗತ್ತಿಸಿರುವದಿಲ್ಲ. ಆದರೂ ಸಹ ರೂ. 3,19,740=00ಗಳನ್ನು ವಿನಾಯಿತಿ ನೀಡಿದಕ್ಕೆ ಸ್ಪಷ್ಟೀಕರಣ ನೀಡುವುದು.

ಸದರಿ ವಿಚಾರಣೆಯಲ್ಲಿ ತೆಗೆಯಲಾದ ಆಕ್ಷೇಪಣೆಯು ಉದಾಹರಣೆ ಮಾತ್ರವಾಗಿದ್ದು, ಈರೀತಿಯ ಎಲ್ಲಾ ಅಧಿಕಾರಿ/ಸಿಬ್ಬಂದಿಗಳ ಆದಾಯ ತೆರಿಗೆ ಲೆಕ್ಕದ ತಖ್ತೆ (Income Tax Calculation Sheet) ಅನ್ನು ಪರಿಶೀಲಿಸಿ ಸರಿಪಡಿಸುವಂತೆ ಸೂಚಿಸಿ **ಆಡಿಟ್ ವಿಚಾರಣೆ ಸಂಖ್ಯೆ: 13 ದಿನಾಂಕ: 27.10.2017** ನೀಡಲಾಗಿದೆ. ಮುಖ್ಯ ಲೆಕ್ಕಾಧಿಕಾರಿಗಳು ಕಾಡಾ ಭೀಗುಡಿ ಇವರು ಒಟ್ಟು 17 ಸಿಬ್ಬಂದಿಗಳ ಪೈಕಿ ಕೇವಲ ಆರು ಸಿಬ್ಬಂದಿಗಳ ಬಾಡಿಗೆ ಪ್ರಮಾಣ ಪತ್ರಗಳನ್ನು ಲಗತ್ತಿಸಿ ಅನುಪಾಲನ ವರದಿ ಸಲ್ಲಿಸಿರುತ್ತಾರೆ. ಇನ್ನುಳಿದ 11 ಸಿಬ್ಬಂದಿಗಳ ಬಗ್ಗೆ ಯಾವುದೇ ದೃಢೀಕರಣ ನೀಡದೇ ಇರುವುದರಿಂದ ಸದರಿ ಸಿಬ್ಬಂದಿಗಳ **ಒಟ್ಟು ಮೊತ್ತ ರೂ. 3,19,740=00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

16 ಸರಕಾರದ ರಸೀದಿ ಪುಸ್ತಕ(General Receipt Book) ಗಳನ್ನು ಬಳಸದೇ ಕಾಡಾ ವತಿಯಿಂದ ರಸೀದಿ ಪುಸ್ತಕಗಳನ್ನು ಮುದ್ರಿಸಿದ ಬಗ್ಗೆ. ಆಡಿಟ್ ವಿಚಾರಣೆ ಸಂಖ್ಯೆ: 23 ದಿನಾಂಕ: 03-11-2017

ಸರಕಾರದ ಹಣಕಾಸು ವ್ಯವಹಾರಗಳಿಗೆ ಸರಕಾರದ ಮುದ್ರಣ ಇಲಾಖೆಯಿಂದ ಮುದ್ರಿತವಾದ ನಮೂನೆ-1 ಸಾಮಾನ್ಯ ರಸೀದಿಯನ್ನು ಬಳಸಬೇಕಾಗಿರುವುದು ಕಡ್ಡಾಯವಾಗಿರುತ್ತದೆ. ಆದರೆ ಕೃಷ್ಣಾ ಕಾಡಾ ಕಛೇರಿಯಲ್ಲಿ ತಮ್ಮ ಕಛೇರಿಯಿಂದ ಮುದ್ರಿಸಿದ ರಸೀದಿಗಳನ್ನು ಸಾಮಾನ್ಯ ರಸೀದಿಯನ್ನಾಗಿ

ಬಳಸಲಾಗುತ್ತಿದೆ. ಸದರಿ ರಸೀದಿಗಳ ಸ್ವೀಕೃತಿ ವಹಿಗಳನ್ನು ಕೂಡಾ ನಿರ್ವಹಿಸಿರುವುದಿಲ್ಲ. ಇದರಿಂದಾಗಿ ಅವ್ಯವಹಾರಗಳು ಆಗುವ ಸಾಧ್ಯತೆಗಳು ಉಂಟು ಮತ್ತು ಡುಪ್ಲಿಕೇಟ್ ರಸೀದಿಗಳು ಆಗುವ ಸಂಭವಗಳಿದ್ದು ತೊಂದರೆಗೆ ಅನುವು ಮಾಡಿಕೊಡುವ ಸಾಧ್ಯತೆಗಳು ಹೆಚ್ಚಾಗಿರುವದರಿಂದ ಸರಕಾರದ ಮುದ್ರಣಾಲಯದಲ್ಲಿ ಮುದ್ರಿತವಾದ ನಮೂನೆ-1 ಸಾಮಾನ್ಯ ರಸೀದಿಯನ್ನು ಉಪಯೋಗಿಸಲು ಸೂಚಿಸಲಾಗಿದೆ.

17 ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿ ಕೇಳಲಾದ ಮಾಹಿತಿಗಳ ಬಗ್ಗೆ.

2015-16ನೇ ಸಾಲಿನಲ್ಲಿ ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿ ಕೇಳಲಾದ ಮಾಹಿತಿಗಳ ವೆಚ್ಚ ರೂ. 18,460=00 ಗಳ ಜಮಾ ಆಗಿದ್ದು ಎಪ್ರಿಲ್-2015 ರಿಂದ ಮಾರ್ಚ-2016 ರವರೆಗೂ ಅದನ್ನು ಲೆಕ್ಕ ಶೀರ್ಷಿಕೆ 0070-80-118-0-01ಕ್ಕೆ ಟ್ರೆಜರೀ ಚಲನ್ 18 ರ ಅಡಿಯಲ್ಲಿ ದಿನಾಂಕ: 19.09.2016 ರಂದು ಜಮಾ ಮಾಡಲಾಗಿದೆ. ಮಾಹಿತಿ ಹಕ್ಕು ಅಡಿಯಲ್ಲಿ ಸ್ವೀಕೃತವಾದ ಎಲ್ಲಾ ಮೊತ್ತವನ್ನು ತಕ್ಷಣವೇ ಸರಕಾರದ ಲೆಕ್ಕ ಶೀರ್ಷಿಕೆಗೆ ಜಮಾವಾಗಬೇಕಾಗಿದ್ದು ಕಡ್ಡಾಯವಾಗಿರುತ್ತದೆ. ಆದರೆ 2015-16ನೇ ಸಾಲಿನಲ್ಲಿ ಜಮೆ ಆದ (ಎಪ್ರಿಲ್-2015 ರಿಂದ ಮಾರ್ಚ-2016ವರೆಗೆ) ಒಟ್ಟು ಮೊತ್ತ ರೂ. 18,460=00ಗಳನ್ನು ಒಂದು ಸಲ ಜಮಾ ಮಾಡಿರುವದನ್ನು ಆಕ್ಷೇಪಿಸಲಾಗಿದೆ. ಅಲ್ಲದೇ 2016-17ನೇ ಸಾಲಿನಲ್ಲಿ ಎಪ್ರಿಲ್-2016 ರಿಂದ ಮಾರ್ಚ-2017 ರವರೆಗಿನ ಒಟ್ಟು ಮೊತ್ತ ರೂ.554=00ಗಳನ್ನು ಚಲನ ಸಂಖ್ಯೆ: 17 ದಿನಾಂಕ: 25.05.2017 ರಂದು ಲೆಕ್ಕ ಶೀರ್ಷಿಕೆ 0070-80-118-0-01ಕ್ಕೆ ಜಮಾ ಮಾಡಲಾಗಿ ಹೀಗೆ ವಿಳಂಬವಾಗಿ ಸರಕಾರಕ್ಕೆ ಭರಣ ಮಾಡಿದ ಬಗ್ಗೆ ವಿವರಣೆಗಳನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಲು ಸೂಚಿಸಲಾಗಿದೆ.

18 ಕಾಮಗಾರಿ ಹಸ್ತಾಂತರಣ ಮಾಡಿದ ಬಗ್ಗೆ ಪ್ರಮಾಣ ಪತ್ರ ಸಲ್ಲಿಸುವ ಬಗ್ಗೆ

Providing irrigation facilities by tank well to sy No. 56/6 and sy No. 295/1 in Kundrgri village in bilagi taluka Bagalkot dist under SCP for the year 2015-16 ಈ ಕಾಮಗಾರಿಯನ್ನು SCP ಯೋಜನೆ ಅಡಿಯಲ್ಲಿ ನಿರ್ವಹಿಸಿದ್ದು, ಕಾಮಗಾರಿಯನ್ನು ಪೂರ್ತಿಗೊಳಿಸಿ ಅಂತಿಮ ಬಿಲ್ಲು ಪಾವತಿಸಲಾಗಿದೆ. ಆದರೆ ಸದರಿ ಕಾಮಗಾರಿಯು ಮುಗಿದ ತಕ್ಷಣ ಫಲಾನುಭವಿಗಳಿಗೆ ಹಸ್ತಾಂತರಿಸಿದ ಬಗ್ಗೆ ಯಾವುದೇ ದಾಖಲೆಗಳು ಲೆಕ್ಕಪರಿಶೋಧನೆಗೆ ಸಲ್ಲಿಸಿರುವದಿಲ್ಲ. ಇದರಿಂದ ಮುಂದೆ ಇಲಾಖೆಗೆ ತೊಂದರೆಗಳಾಗುವ ಸಾಧ್ಯತೆಗಳು ಇರುವದರಿಂದ ಕಾಮಗಾರಿ ಹಸ್ತಾಂತರಿಸಿದ ಪ್ರಮಾಣ ಪತ್ರವನ್ನು ಪಡೆಯುವಂತೆ ಹಾಗೂ ಅದನ್ನು ಲೆಕ್ಕಪರಿಶೋಧನೆಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

19 ವಿಭಾಗದ ವಾಹನ ದುರಸ್ತಿ ಬಿಲ್ಲುಗಳ ಪಾವತಿಯಲ್ಲಿ ನಿಯಮಗಳನ್ನು ಪಾಲಿಸದೇ ಇರುವ ಕುರಿತು (ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ FIC.DIV No.03 ಆಲಮಟ್ಟಿ)

ಕಾರ್ಯನಿರ್ವಾಹಕ ಅಭಿಯಂತರರು FIC DIV No. 03 ಆಲಮಟ್ಟಿ ವಿಭಾಗಕ್ಕೆ ಸಂಬಂಧಿಸಿದ ಕೆಳಕಂಡ ವಾಹನ ದುರಸ್ತಿ ಬಿಲ್ಲುಗಳನ್ನು ಮಾರ್ಚ-2017 ರಲ್ಲಿ ಪಾವತಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ವಾಹನ ಸಂಖ್ಯೆ	ದಿನಾಂಕ	ಮೊತ್ತ
1	Vehicle No. KA. 28 M 4143	21-03-2017	74,878=00
2	Vehicle No. KA. 28 M 4146	21-03-2017	71,518=00
3	Vehicle No. KA. 28 M 4513	21-03-2017	38,601=00
		ಒಟ್ಟು ರೂ.	**1,84,997=00**

ಸದರಿ ಪಾವತಿಗೆ ಸಂಬಂಧಿಸಿದಂತೆ ಮಂಜೂರಾತಿಯ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಿರುವುದಿಲ್ಲ. ಈ ಕುರಿತು **ಆಡಿಟ್ ವಿಚಾರಣೆ ಸಂಖ್ಯೆ: 21 ದಿನಾಂಕ: 02-11-2017** ನೀಡಲಾಗಿತ್ತು. ಮುಖ್ಯ ಲೆಕ್ಕಾಧಿಕಾರಿಗಳು ಕಾಡಾ ಭೀಗುಡಿ ಇವರು KA. 28 M 4143, KA. 28 M 4146, ಗೆ ಸಂಬಂಧಿಸಿದಂತೆ ದಾಖಲೆಗಳನ್ನು ಸಲ್ಲಿಸಿದ್ದು, KA. 28 M 4513 ಗೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ ಆದ್ದರಿಂದ ಸದರಿ ವಾಹನಕ್ಕೆ ಪಾವತಿಯಾದ ಮೊತ್ತ ಈ ಕೆಳಗೆ ತೋರಿಸಿದಂತೆ **ರೂ. 38,601=00ಗಳನ್ನು ಮಾತ್ರ ಆಕ್ಷೇಪಣೆಯಲ್ಲಿ ಇಡಲಾಗಿದೆ.**

Sl.No	Vehicle No. KA. 28 M 4513	Amount	Agency Name
1	Bill No. 123 Date: 21-03-2017	11,165.00	Shiva Traders Allamatti
2	Bill No. 128 Date: 22-03-2017	16,986.00	Muttu Traders Alamatti
3	Bill No. 340 Date: 22-03-2017	7,600.00	Sai Engineering works
		38,601.00	

20 ಮೆ॥ ಮನೀಷ್ ಮ್ಯಾನ್‌ಪವರ್ ಏಜೆನ್ಸಿ ಇವರಿಂದ ಹೊರಮೂಲ ಸಿಬ್ಬಂದಿ ಸೇವೆಯನ್ನು ಪಡೆದಿರುವ ಬಗ್ಗೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ 2016-17ನೇ ಸಾಲಿನಲ್ಲಿ ಮೆ॥ ಮನೀಷ್ ಮ್ಯಾನ್‌ಪವರ್ ಏಜೆನ್ಸಿ ಇವರಿಂದ ಹೊರಮೂಲ ಸಿಬ್ಬಂದಿಯವರ ಸೇವೆಯನ್ನು ಪಡೆದು ಬಿಲ್ಲುಗಳನ್ನು ಪಾವತಿ ಮಾಡಲಾಗಿದ್ದು, ಅವುಗಳ ವಿವರ ಈ ಕೆಳಗಿನಂತಿದೆ

ಕ್ರ ಸಂ	ಆಡಳಿತಧಿಕಾರಿಗಳು ಕೃಷ್ಣಾ ಕಾಡಾ ಇವರ ಆದೇಶ ಸಂಖ್ಯೆ & ದಿನಾಂಕ	ಸಿಬ್ಬಂದಿಯ ವಿವರ	ದರ ಪ್ರತಿ ಮಾಹೆಗೆ		ಪಾವತಿ ಅವಧಿ	ಮೊತ್ತ (ರೂ.ಗಳಲ್ಲಿ)
01	ಕಾಡಾ:ಸಿಬ್ಬಂದಿ-2:ಹೊರಗುತ್ತಿಗೆ: 21: 2016-17:3379 ದಿ: 10-08-2016 (ದಿ.18-05-2016 ರಿಂದ ಅನ್ವಯ)	ಆಪ್ತ ಸಹಾಯಕ	ರೂ.2,652/-	1) 2)	18.5.2016 ರಿಂದ 31.5.2016 06/2016 ರಿಂದ 03/2017	5,713=00 1,26,520=00
02	ಕಾಡಾ:ಸಿಬ್ಬಂದಿ-2:ಹೊರಗುತ್ತಿಗೆ:40: 2016-17:4494 ದಿ:02-08-2016 (ದಿ.02-08-2016 ರಿಂದ ಅನ್ವಯ)	ಪಂಪ್ ಆಪರೇಟರ್	ರೂ.10,795/-	1) 2)	2.9.2016 ರಿಂದ 30.9.2016 10/2016 ರಿಂದ 03/2017	10,435=00 64,770=00
03	ಕಾಡಾ:ಸಿಬ್ಬಂದಿ-1:ಹೊರಗುತ್ತಿಗೆ:102: 2016-17:7082 ದಿ: 19-12-2016 (ದಿ.01-12-2016 ರಿಂದ ಅನ್ವಯ)	ವಾಹನ ಚಾಲಕ	ರೂ.12,317/-	1)	12/2016 ರಿಂದ 03/2017	49,268=00
04	ಕಾಡಾ:ಸಿಬ್ಬಂದಿ-1:ಹೊರಗುತ್ತಿಗೆ:102: 2016-17:7699 ದಿ: 13-01-2017 (ದಿ.07-12-2016 ರಿಂದ ಅನ್ವಯ)	ಆಪ್ತ ಸಹಾಯಕ (ಅಧ್ಯಕ್ಷರ ಗೃಹ ಕಛೇರಿ)	ರೂ.12,652/-	1) 2)	7.12.2016 ರಿಂದ 31.12.2016 1.2017 ರಿಂದ 03/2017	10,203=00 37,956=00
05	ಕಾಡಾ:ಸಿಬ್ಬಂದಿ-1:ಹೊರಗುತ್ತಿಗೆ:102: 2016-17:7704 ದಿ: 13-01-2017 (ದಿ.07-12-2016 ರಿಂದ ಅನ್ವಯ)	ಸಿಪಾಯಿ	ರೂ.10,795/-	1) 2)	7.12.2016 ರಿಂದ 31.12.2016 01/2017 ರಿಂದ 03/2017	8,705=00 32,385=00
ಒಟ್ಟು						**3,45,955=00**

1 ಸದರಿ ಏಜೆನ್ಸಿಯವರಿಗೆ ಪಾವತಿ ಮಾಡಲಾದ ಒಟ್ಟು ರೂ. 3,45,955=00 ಗಳಿಗೆ ಈ ಕೆಳಗಿನಂತೆ EPF & ESI ಸಂಬಂಧಿಸಿದ ಇಲಾಖೆಗೆ ಪಾವತಿಸಬೇಕಾಗಿರುತ್ತದೆ.

01.	EPF	-	13.61%	ರೂ.	47,084=00
02.	ESI	-	4.75 %	ರೂ.	16,433=00
			ಒಟ್ಟು	**ರೂ.**	**63,517=00**

ಒಟ್ಟು ರೂ. 63,517/- ಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ಏಜೆನ್ಸಿಯವರನ್ವಯ ಪಾವತಿ ಮಾಡಿರುವ ಬಗ್ಗೆ ದಾಖಲೆ/ವಿವರಗಳನ್ನು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುವುದಿಲ್ಲ.

2 ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಅಧಿನಿಯಮ 1999ರ ನಿಯಮ 5ರ ಪ್ರಕಾರ ರೂ. 1.00 ಲಕ್ಷಕಿಂತ ಹೆಚ್ಚಿನ ಮೊತ್ತಕ್ಕೆ ಟೆಂಡರ್ ಪ್ರಕ್ರಿಯೆ ಮೂಲಕ ಹೊರಮೂಲ ಸಿಬ್ಬಂದಿಗಳ ಸೇವೆಯನ್ನು ಪಡೆಯಬೇಕಾಗಿರುತ್ತದೆ. ಆದರೆ ಸದರಿ ಹೊರಮೂಲ ಸಿಬ್ಬಂದಿಗಳನ್ನು ಟೆಂಡರ್ ಪ್ರಕ್ರಿಯೆ ಕೈಗೊಳ್ಳದೇ ನೇರವಾಗಿ ನೇಮಕ ಮಾಡಿಕೊಂಡು ರೂ. 3,45,955=00ಗಳನ್ನು ಪಾವತಿ ಮಾಡಲಾಗಿರುತ್ತದೆ. **ಪ್ರಯುಕ್ತ ಪಾವತಿಯಾದ ರೂ. 3,45,955=00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

3 ಆದಾಯ ತೆರಿಗೆ ಸೆಕ್ಷನ್ 194 C ನ ಅನ್ವಯ ಏಜೆನ್ಸಿಯವರ ಬಿಲ್ಲಿನಲ್ಲಿ ಶೇ. 2 ರಷ್ಟು ಆದಾಯ ತೆರಿಗೆ ಕಡಿತಗೊಳಿಸಬೇಕಾಗಿರುತ್ತದೆ. ಆದರೆ ಪಾವತಿಯಾದ ರೂ. 3,45,955=00 ಗಳಿಗೆ ಶೇ. 2 ರಷ್ಟು ಆದಾಯ ತೆರಿಗೆ ಮೊತ್ತ ರೂ. 6,919=00 ಗಳನ್ನು ಕಡಿತಗೊಳಿಸದೇ ಇರುವದರಿಂದ **ಸದರಿ ಮೊತ್ತವನ್ನು ವಸೂಲಾತಿಯಲ್ಲಿಡಲಾಗಿದೆ.**

4 ಹೊರಮೂಲ ಸಿಬ್ಬಂದಿಯ ಸೇವೆಯನ್ನು ಒದಗಿಸಿರುವ ಏಜೆನ್ಸಿಯೊಂದಿಗೆ ಒಪಂದದ ಕರಾರು ಪತ್ರ ಮಾಡಿಕೊಳ್ಳಬೇಕಾಗಿದ್ದು, ಆದರೆ ಒಪಂದದ ಕರಾರು ಪತ್ರ ಮಾಡಿಕೊಳ್ಳದೇ ಇರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ.

ಈ ಕುರಿತು ಆಡಿಟ್ **ವಿಚಾರಣೆ ಸಂಖ್ಯೆ: 17 ದಿನಾಂಕ: 30.10.2017 ನೀಡಲಾಗಿತ್ತು.** ಇದಕ್ಕೆ ಸಂಬಂಧಿಸಿದಂತೆ ನೀಡಲಾದ ಉತ್ತರ ಜೊತೆಗೆ ಲಗತ್ತಿಸಲಾದ ಚಲನ್ ಮತ್ತು ಇತರೆ ದಾಖಲೆಗಳು ಕಾಡಾ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರ ವಿವರಣೆಯನ್ನು ಒಳಗೊಂಡಿರುವುದಿಲ್ಲ. ಕಾರಣ ಕಂಡಿಕೆಯನ್ನು ಮುಂದುವರಿಸಲಾಗಿದೆ.

21 ಸಾಮಾನ್ಯ ಅಭಿಪ್ರಾಯ:

ಲೆಕ್ಕಪರಿಶೋಧನಾ ಸಮಯದಲ್ಲಿ ಹಾಜರುಪಡಿಸಿದ ದಾಖಲೆಗಳ ಆಧಾರದ ಮೇಲೆ ಕರಡು ವರದಿಯನ್ನು ಸಿದ್ಧಪಡಿಸಲಾಗಿದೆ. ವಹಿವಾಟುಗಳು ಇಲ್ಲದ ಬ್ಯಾಂಕ ಖಾತೆಗಳನ್ನು ಮುಂದುವರಿಸಿಕೊಂಡು ಬರಲಾಗಿದೆ. ಕಾಮಗಾರಿಗಳ ಬಿಲ್ಲುಗಳಲ್ಲಿ ನಿಗದಿಪಡಿಸಿದ ದರಕ್ಕಿಂತ ಕಡಿಮೆ ರಾಜಧನ ಕಡಿತ ಮಾಡಲಾಗಿದೆ. ಇ-ಪ್ರೋಕ್ಯೂರ್‌ಮೇಂಟ್‌ನಲ್ಲಿ ಯಶಸ್ವೀ ಆದ ಅಂತಿಮ ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಳ್ಳುವ ಮುಂಚೆ ಕರಾರು ಮೊತ್ತದ ಪ್ರತಿಶತ 5 ರಷ್ಟು ಭದ್ರತಾ ಠೇವಣಿಯನ್ನು ಮುಂಚಿತವಾಗಿ ಪಾವತಿಸಬೇಕಾಗಿದ್ದು ಚಾಲ್ತಿ ಬಿಲ್ಲುಗಳಲ್ಲಿ ಕಡಿತಗೊಳಿಸುತ್ತಿರುವುದು ಮತ್ತು ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಸ್ಟಾಂಪ್ ಪೇಪರ್‌ನ್ನು ಪಡೆದು ಕರಾರು ಒಪ್ಪಂದ ಮಾಡಿಕೊಳ್ಳದೇ ಇರುವುದು ಗಮನಿಸಲಾಗಿದೆ. ಪ್ರಾಧಿಕಾರವು ಏಕ ನಮೂದು ಲೆಕ್ಕ ಪದ್ಧತಿಯನ್ನು ಅಳವಡಿಸಿಕೊಂಡಿದೆ, ದ್ವಿನಮೂದು ಲೆಕ್ಕ ಪದ್ಧತಿಯನ್ನು ಅಳವಡಿಸಿಕೊಂಡರೆ ಲೆಕ್ಕಪತ್ರದ ನಿರ್ವಹಣೆಯಲ್ಲಿ ನಿಖರತೆ ಮತ್ತು ಶಿಸ್ತು ತರಲು ಸಾಧ್ಯವಾಗುತ್ತದೆ ಎಂದು ಆಡಿಟ್ ಅಭಿಪ್ರಾಯಪಟ್ಟಿದೆ.

ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಛೇರಿ ಕಲಬುರಗಿ

ಅನುಬಂಧ-2

DETAILS OF OPENING BALANCE AS ON 01.04.2016

Sl No	Details of the Fund	SBH Account Numbers	Amount
1	CADA A/C (SBH)	52187860160	12,76,54,739.00
2	CADA Receipts A/C	52187866480	1,57,78,888.00
3	KBJNL A/C	52187866504	47,43,262.00
4	KBJNL Receipts A/C	52187866491	15,125.00
5	SBH Narayanapur	62006711927	71,027.00
		TOTAL	**14,82,63,041.00**

DETAILS OF CLOSING BALANCE AS ON 31.03.2017

Sl No	Details of the Fund	SBH Account Numbers	Amount
1	KBJNL Running A/C	52187866504	1,25,42,460.00
2	KBJNL Receipts A/C	52187866491	505.00
3	CADA Running A/C	52187860160	22,22,12,127.00
4	CADA Receipt A/C	52187866480	3,68,43,99.00
5	SBH Narayanapur	62006711927	71,027.00
6	SBI Shahapur	34732267085	2,40,810.00
		TOTAL	**23,87,51,328.00**

ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಛೇರಿ ಕಲಬುರಗಿ

Audit Report of Command Area Development Authority for Upper Krishana Project, Bheemarayanagudi (CADA-UKP) for the Year 2016-17			
Preamble: The audit of CADA-UKP, Bheemarayanagudi for the Year 2016-17 was taken up as per Section 24(2) of the Karnataka Command Area Development Act.			
2	**General Details :-**		
3	**Name of the Institution.**	Command Area Development Authority, (CADA-UKP), Bheemarayanagudi.	
